Mr. SPEAKER.—If it is no repetition Members can discuss. But I would say, what applies to the admissibility of the motion applies also to the discussion.

2-30 P.M.

Sri G. VENKATAI GOWDA.—Would the Ministers reply at the end of the debate?

Mr. SPEAKER.—They will reply only to the new points raised.

Sri G. VENKATAI GOWDA.—They will have to reply to all the points raised in the debate on the Governor's address under rules 22 and 23.

Mr. SPEAKER.—That is not correct. They would reply to the new points, if raised.

Sri C. M. ARUMUGHAM.—Sir, according to the programme we ought to have taken up bills today. I have come prepared with them after spending much time last night. To my surprise, I find that there is a change in the programme.

Mr. SPEAKER.—The Hon'ble Member is probably referring to the Circular of the Secretary sent to all the Members. The programme only gives a broad indication of the business likely to be taken up and it is only in the nature of a notice. As to what items should be taken on any day, depends on the nature and pressure of work. I am sure the Hon'ble Member has really not wasted time studying Bills, because those Bills would surely comeup before the House some day or the other.

Motion of thanks to the Governor for his Address.

Debate—(*contd.*)

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ವಿರೋಧ ಪಕ್ಷದವರು ತಂದಿದ್ದ ಅವಿಶ್ವಾಸ ನಿರ್ಣಯದ ಮೇಲೆ ಜವಾಬನ್ನು ಕೊಡುತ್ತ ದೇಶದ ಪುರೋಭಿವೃದ್ಧಿಯ ಮಟ್ಟವನ್ನೇ ಮರೆತು ಮಾತನಾಡುವ ಕಾಲ ಇಂದಿನ ದಿವಸ ಕಾಂಗ್ರೆಸ್ ಸರ್ಕಾರಕ್ಕೆ ಒದಗಿದೆ. ಪ್ರಜಾಪ್ರಭುತ್ವದ ನೀತಿಯನ್ನು ನಮ್ಮ ಮಾನ್ಯ ಕಾಂಗ್ರೆಸ್ ಸದಸ್ಯರು ತಿಳಿದುಕೊಂಡಿದ್ದ ಪಕ್ಷದಲ್ಲಿ, ಪಾಶ್ಚಿಮಾತ್ಯ ದೇಶಗಳಲ್ಲಿ ವಿರೋಧ ಪಕ್ಷದ ಟೀಕೆಯನ್ನು ಹೇಗೆ ಪರಿಗಣಿಸುತ್ತಾರೆನ್ನುವುದನ್ನು ಅಕ್ಷರಶಃ ತಿಳಿದುಕೊಂಡಿದ್ದ ಪಕ್ಷದಲ್ಲಿ ಟ್ರೆಜರಿ ಬೆಂಚುಗಳಲ್ಲಿರತಕ್ಕವರು ಬಹಳ ಸೌಮ್ಯ ರೀತಿಯಲ್ಲಿ, ಪ್ರಜಾಪ್ರಭುತ್ವದ ರೀತಿ ನೀತಿಗಳನ್ನು ಮತ್ತು ಮೂಲತತ್ವವೇನು ಎನ್ನುವುದನ್ನು ತಿಳಿದುಕೊಂಡು ಮಾತನಾಡಿದರೆ ನಮ್ಮ ಮೈಸೂರು ಸಂಸ್ಥಾನಕ್ಕೆ ಇಡೀ ಇಂಡಿಯಾ ದೇಶಕ್ಕೆ ಘನತೆ ಉಳಿಯುತ್ತದೆ. ವಿರೋಧ ಪಕ್ಷದವರು ಇಂದು ಮಾತನಾಡಬೇಕಾಗಿದ್ದರೆ ವೈಯಕ್ತಿಕವಾಗಿ ಯಾರ ವಿಚಾರದಲ್ಲಿಯೂ ಮಾತನಾಡುತ್ತಿಲ್ಲ. ಇವೊತ್ತು ತಾತ್ಕಾಲಿಕವಾಗಿ ನೀವು ಮಂತ್ರಿಗಳ ಸ್ಥಾನದಲ್ಲಿ ಕುಳಿತಿದ್ದೀರಿ. ನಾಳೆಯ ದಿನ ನೀವು ಈ ಸ್ಥಾನಕ್ಕೆ ಬಂದು ನಾವು ನಿಮ್ಮ ಸ್ಥಾನಕ್ಕೆ ಹೋಗಬಹುದು. ಯಾವುದೂ ಶಾಶ್ವತವಲ್ಲ.

†Sri C. M. ARUMUGHAM (Kolar Gold Fields).—Sir, my friend said that Members on this side are likely to occupy the Treasury benches and that they of the ruling party are likely to sit in the opposition. The second contingency, I submit would not arise because those sitting in the treasury benches would be defeated in the elections and they would not sit in this House at all. Of couise, it may happen that we here may go and sit on the other side some day.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಮ್ಮ ದೇಶದ ಎರಡು ಕೋಟಿ ಜನಗಳ ಪುರೋಭಿವೃದ್ಧಿಯನ್ನು ಮರೆತು ನಿಮಗೆ ಆತ್ಮೀಯವಾದ ಮಾತುಗಳನ್ನು ವಿರೋಧ ಪಕ್ಷಕ್ಕೆ ಹೇಳುವುದಾದರೆ, ಹೊರ ದೇಶದವರು, ಹೊರ ಸಂಸ್ಥಾನದವರು ನಮ್ಮನ್ನು ಯಾವ ಮಟ್ಟಕ್ಕೆ ತರುತ್ತಾರೆ ಎನ್ನುವುದನ್ನು ನಾವು ಮರೆಯಬಾರದು. ನಾವು ಮಾಡತಕ್ಕ ಟೀಕೆ ಟಿಪ್ಪಣಿಗಳಿಗೆ ನೀವು ಕೊಡುವ ಜವಾಬನ್ನು ಸಂತೋಷವಾಗಿ ಸ್ವಾಗತಿಸುತ್ತೇವೆ. ನೀವು ಹೇಳತಕ್ಕದ್ದೂ ಜನಗಳ ಪರವಾಗಿ, ನಾವು ಹೇಳತಕ್ಕದ್ದೂ ಜನಗಳ ಪರವಾಗಿ: ವೈಯಕ್ತಿಕವಾಗಿ ಏನೂ ಇಲ್ಲ. ದೇಶದಲ್ಲಿ ಪ್ರಜಾಪ್ರಭುತ್ವ ನೀತಿಯ ಮಟ್ಟವನ್ನು ನಾವು ಬೆಳೆಸಬೇಕಾದರೆ ಟೀಕೆಟಿಪ್ಪಣಿಗಳಿಗೆ ಉತ್ತರಕೊಡುವ ಮಟ್ಟವನ್ನು ನಾವು ಮೊದಲು ಕಲಿತುಕೊಳ್ಳಬೇಕಾದ್ದು ನಮ್ಮ ಕರ್ತವ್ಯ. ಟ್ರೆಜರಿ ಬೆಂಚಿನವರು ಜವಾಬು ಕೊಡುವಾಗ ಶಾಂತ ರೀತಿಯಿಂದ ಇರುವುದು ಒಳ್ಳೆಯದು. ಟ್ರೆಜರಿ ಬೆಂಚಿಗೆ ನಾವು ಬಂದು ಕುಳಿತುಕೊಂಡರೂ ಬಹಳ ಎಚ್ಚರಿಕೆಯಿಂದ ಮಾತನಾಡಬೇಕಾದ್ದು ನಮ್ಮ ಕರ್ತವ್ಯ.

ಇಂದಿನ ಸರ್ಕಾರ ಹಳ್ಳಿಗಾಡಿನ ಜನಗಳನ್ನು ಮರೆತು ತಾತ್ಕಾಲಿಕವಾದ ಆಶೋತ್ತರಗಳನ್ನು ಈಡೇರಿಸಿಕೊಳ್ಳುವುದರಲ್ಲಿ, ವಿರೋಧ ಪಕ್ಷಕ್ಕೆ ತಾತ್ಕಾಲಿಕವಾದ ಜವಾಬು ಕೊಡುವುದರಲ್ಲಿ ಒಳಗಾಗಿದೆಯೇ ವಿನಾ ಈ ಸರ್ಕಾರದಲ್ಲಿ ದಕ್ಷತೆ ಏನಾದರೂ ಇದೆಯೇ, ಇವರ ಅವಧಿಯಲ್ಲಿ ದೇಶಕ್ಕೆ ಏನಾದರೂ ಮಾಡಿದ್ದಾರೆಯೇ ಎಂದು ಅಂಕಿ ಅಂಶಗಳನ್ನು ನೋಡುವುದಾದರೆ ಏನೂ ಇಲ್ಲ. ಸರ್ಕಾರದಲ್ಲಿ ದಕ್ಷತೆ ಹೇಗಿದೆ ಎನ್ನುವುದನ್ನು ದೇಶದ ಜನಗಳ ಮುಂದೆ ಇಡೋಣ. ಇಲ್ಲಿರುವ 200 ಜನಗಳ ಮುಂದೆ ಇಡುವುದು ಯೋಗ್ಯವಲ್ಲ. ನಮ್ಮ ಮತ್ತು ನಿಮ್ಮ ಮಾತುಗಳನ್ನು ದೇಶದ ಜನತೆಯ ಮುಂದೆ ಇಡೋಣ. ನೀವು ಆಡಳಿತವನ್ನು ಹೇಗೆ ಪರಿಪಾಲಿಸುತ್ತಿದ್ದಿರಿ ಮತ್ತು ವಿರೋಧ ಪಕ್ಷದವರಾದ ನಾವು ಏನೇನು ಸಾಧಿಸುತ್ತಿದ್ದೇವೆ ಎನುವುದನ್ನು ಜನಗಳು ಹೇಳಬೇಕು. ಅದು ಮುಂದಿನ ಚುನಾವಣೆಗಳಲ್ಲಿ ಗೊತ್ತಾಗುತ್ತದೆ.

ಶ್ರೀ ದೇವರಾಜ ಅರಸ್ (ಹುಣಸೂರು).—ತಾಲ್ಲೂಕು ಬೋರ್ಡ್ ಚುನಾವಣೆಗಳು ಆದುವಲ್ಲ.

ಶ್ರೀ ಎಚ್. ಜಿ. ನರಸಿಂಹೇ ಗೌಡ.—ಆ ವಿಷಯಕ್ಕೆ ಬಂದಾಗ ಹೇಳುತ್ತೇನೆ. ಈ ಗವರ್ನರವರ ಭಾಷಣದಲ್ಲಿ ಈ ಸರಕಾರ ದೇಶದ ಆರ್ಥಿಕ ಮಟ್ಟವನ್ನು ಮುಂದುವರಿಸಲು ಬಹು ತಾತ್ಕಾಲಿಕವಾದ ವ್ಯಾಮೋಹಕ್ಕೆ ಒಳಗಾಗಿ ಸರಕಾರ ನಡೆಸತಕ್ಕ ಒಂದು ಕಾಲ ಈಗ ಒದಗಿದೆ. ಇದರ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಡುವದಾದರೆ ಇದೇ ಸಭೆಯಲ್ಲಿ ಹಿಂದೆ ಮಾನ್ಯ ಸದಸ್ಯರಾದ ಶ್ರೀಮಾನ್ ರಾಜಯ್ಯ ಶೆಟ್ಟಿಯವರು, ಒಬ್ಬರು ಜನರಲ್ ಸೆಕ್ರೆಟರಿಯಾದ ಕಾಂಗ್ರೆಸ್ಸಿನ ಸದಸ್ಯರೊಬ್ಬರು, ಕಾನೂನಿಗೆ ವಿರೋಧವಾಗಿ ನಡೆದಾಗ ಆ ಕಂಟ್ರಾಕ್ಟರು ಇದ್ದ ಕಾಲದಲ್ಲಿ ಕೆಲಸವನ್ನು ಮುಗಿಸದೇ ಅವರಿಗೆ ರಿನ್ಯೂ ಮಾಡಬೇಕು ಎಂದು ಹೇಳುವ ಕಾಲದಲ್ಲಿ ಅರ್ಧ ಗಂಟೆಯ ಚರ್ಚೆ ಇಲ್ಲಿ ನಡೆದಾಗ ನಮ್ಮ ಮಾನ್ಯ ಜತ್ತಿಯವರು, ಅರಣ್ಯ ಇಲಾಖೆಯ ಮಂತ್ರಿಗಳಾದ ಶ್ರೀ ಪಾಟೀಲರವರು ಇದನ್ನು ತಾತ್ಕಾಲಿಕವಾಗಿ ರಿಮೂವ್ (Remove) ಮಾಡಲಿಕ್ಕೆ ಪರ್‌ಮಿಷನ್ನನ್ನು ಕೊಡದೇ ಇಂದಿನ ದಿವಸ ಹತ್ತು ಸಾವಿರ ರೂಪಾಯಿಗಳಷ್ಟು ಫೈನನ್ನು ಹಾಕಿ ಅದೇ ಭಾರತೀ ಟ್ರೇಡಿಂಗು ಕಂಪನಿಯವರಿಗೆ ಕೊಟ್ಟಿದ್ದಾರೆ. ಅಲ್ಲದೆ ಈ ಕಂಟ್ರಾಕ್ಟರ್‌ವರಿಗೆ ಹಿಂದಿದ್ದ ಮಂತ್ರಿಗಳಾದ ರುದ್ರಪ್ಪನವರೇ ಈಗ ಬಂದಿದ್ದಾರೆಂದು ನಮಗೆ ಅನುಕೂಲವಾಗುತ್ತೆಂದು ಅದೇ ಕಂಪನಿಯವರು ಹೇಳುತ್ತಿದ್ದಾರೆ.

ಶ್ರೀ ಕೆ. ಎಫ್. ಪಾಟೀಲ್.—ಇವರಿಗೆ ರಿನ್ಯೂ ಮಾಡಲು ಅವಕಾಶವನ್ನು ಕೊಟ್ಟಿಲ್ಲ ಅವರಿದ್ದಾಗ ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಟ್ಟು ಮತ್ತು ಅದನ್ನು ತೆಗೆದುಕೊಂಡು ಹೋಗಲು ಆಗಲೇ ಪಾಸನ್ನೂ ಕೊಡಲಾಗಿದೆ. ಆದರೆ ಕಡಿದುಹಾಕಿದ ಮರಗಳನ್ನು ತೆಗೆದುಕೊಂಡು ಹೋಗಲು ಮಳೆ ಬಂದಕಾರಣ ಸ್ವಲ್ಪ ನಿಧಾನವಾಗಿರಬಹುದು. ಇವರಿಗೆ ರಿನ್ಯೂಯಲ್ಲನ್ನು ಪುನಃ ಮಾಡಿಲ್ಲ. ಇದರಲ್ಲಿ ನಾನು ಮಾಡಿದ ಪಾಪವೇನೂ ನನಗೆ ಗೊತ್ತಾಗುವುದಿಲ್ಲ.

ಶ್ರೀ ಎಸ್. ಜೆ. ನರಸಿಂಹೇ ಗೌಡ.—ಹಾಗಿದ್ದರೆ ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ನಾನು ವೈಯುಕ್ತಿಕವಾಗಿ ಏನೂ ಇಲ್ಲ ಹೇಳುತ್ತಿಲ್ಲ. ಅನೇಕ ಫಾರಸ್ಟು ಕಂಟ್ರಾಕ್ಟರುಗಳು ನಮ್ಮ ಶ್ರೀ ರುದ್ರಪ್ಪನವರು, ಹಿಂದಿದ್ದವರು ಅರಣ್ಯ ಇಲಾಖೆಯ ಮಂತ್ರಿಗಳಾಗಿ ಬಂದರು ಎಂದು ಅವರುಗಳು ತಮ್ಮ ಸಂಪಾದನೆಯನ್ನು ಸುಖವಾಗಿ ಮಾಡಿಕೊಳ್ಳಬಹುದು ಎಂದು ವ್ಯಾಮೋಹದಿಂದ ಇದ್ದಾರೆ. ಈಗಿನ ಅರಣ್ಯ ಇಲಾಖೆಯ ಮಂತ್ರಿಗಳು ಇದಕ್ಕೆಲ್ಲಾ ಅವಕಾಶ ಕೊಡಬಾರದು ಮರಗಳನ್ನು ಹೆಚ್ಚಾಗಿ ಅರಣ್ಯಗಳಲ್ಲಿ ಕಡಿಸದೆ ಅರಣ್ಯಗಳನ್ನು ಹೆಚ್ಚಾಗಿ ಬೆಳಸುವ ಕೆಲಸಗಳನ್ನು ಮಾಡಬೇಕು ಸರಕಾರದವರು ಈ ರೀತಿಯಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಇನ್ನು ಮುಂದೆ ಅರಣ್ಯಗಳಲ್ಲಿ ಮರಗಳನ್ನು ಕಡಿಯದೇ ಹಾಗೇ ಅದನ್ನು ಬೆಳೆಸುವ ಪ್ರಯತ್ನವನ್ನು ಮಾಡಬೇಕು.

ಎರಡನೆಯದಾಗಿ ನಮ್ಮ ಈ ಸರಕಾರ ಬಂದಮೇಲೆ ಹಳ್ಳಿಗಾಡಿನ ಮಕ್ಕಳಿಗೆ ಕೆಲಸವನ್ನು ಒದಗಿಸುವದರಲ್ಲಿ ಬಹಳ ಹಿಂದುಳಿದಿದೆ. ಈ ವಿಷಯವನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ನಮ್ಮ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಗೆಜೆಟೆಡ್ಡು ಮತ್ತು ನಾನ್ ಗೆಜೆಟೆಡ್ಡು ಅಪಾಯಿಂಟುಮೆಂಟುಗಳನ್ನು ಕೊಡಬೇಕಾಗಿದ್ದರೆ ಸರಿಯಾಗಿ ಮಾಡುತ್ತಿಲ್ಲ, ಬಹುಶಃ ಅವರದೇನೂ ತಪ್ಪಲ್ಲ. ನಮ್ಮ ಪಬ್ಲಿಕ್ ಸರ್ವಿಸು ಕಮಿಷನ್ನಿನ ರೂಲ್ಸುಗಳನ್ನು ಮಾಡುವದರಲ್ಲಿ ತಪ್ಪಾಗಿದೆ. ನಾವು ನೋಡಿದಂತೆ ನೂರಕ್ಕೆ 80 ಜನರನ್ನು ನೇಮಕ ಮಾಡುವದು ಅರ್ಬನ್ ಏರಿಯಾದವರೇ ಆಗಿದ್ದಾರೆ. ಇದರ ಅಂಕೆ ಅಂಶಗಳನ್ನು ನಾವು ನೋಡಿದರೆ ಹೆಚ್ಚಾಗಿ ಸಿಟಿಯಲ್ಲಿರುವವರಿಗೇನೆ ಕೆಲಸಗಳು ದೊರೆಯುತ್ತಿವೆ ; ಸುಮಾರು ಶೇಕಡಾ 80 ರಷ್ಟು ಕೆಲವು ವೇಳೆ 90 ರಷ್ಟು ಜನಕ್ಕೆ ಕೆಲಸಗಳು ಅರ್ಬನ್ ಏರಿಯಾಕ್ಕೆ ಸೇರಿದವರಿಗೇ ಸಿಗುತ್ತಿದೆ. ಅನೇಕ ರೀತಿಯಲ್ಲಿ ಅವಕಾಶಗಳನ್ನು ಉಪಯೋಗಿಸಿಕೊಂಡು ಮೆರಿಟ್ಟುಗಳನ್ನು ಪಡೆದು ಪಾಸು ಮಾಡಿರುತ್ತಾರೆ ಮತ್ತು ಯಾವುದೋ ರೀತಿಯಲ್ಲಿ ಕೆಲಸಗಳನ್ನು ದೊರಕಿಸಿಕೊಳ್ಳುತ್ತಾರೆ, ಆದರೆ ರೂರಲ್ ಪಾರ್ಟುಗಳಲ್ಲಿರುವವರಿಗೆ ಯಾವ ಕೆಲಸ ಕಾರ್ಯಗಳೂ ಸಿಗುತ್ತಿಲ್ಲ. ಹಾಗೆ ಸಿಕ್ಕಿದರೂ ನೂರಕ್ಕೆ ಐದರಷ್ಟು ಅಥವಾ ಹತ್ತಕ್ಕಿಂತ ಹೆಚ್ಚಿಗೆ ಕೆಲಸಗಳು ಸಿಗುತ್ತಿಲ್ಲ. ಇದು ನಿಜವಾಗಿಯೂ ಬಹಳ ಅನ್ಯಾಯವಾಗಿದೆ, ಇದನ್ನು ನಾಗನ್‌ಗೌಡರ್ ಕಮಿಟಿಯವರು ರೂರಲ್ ಪಾರ್ಟಿಗೇ ಪ್ರತ್ಯೇಕವಾಗಿ ಇರುವಹಾಗೆ ಮಾಡಬಹುದು. ಇದರಲ್ಲಿ ಮುಂದುವರಿದ ಪಂಗಡದವರಿಗಾಲಿ ಯಾರಾಗಲಿ ಬರಬಹುದು. ಅರ್ಬನ್ನು ಏರಿಯಾಕ್ಕೆ ಪ್ರತ್ಯೇಕವಾಗಿ ಮಾಡುವಂತೆ ರೂಲ್ಸುಗಳನ್ನು ಮಾಡಿಟ್ಟರೆ ಸಾಕು. ಇದು ಕಾನ್ಸಿಟ್ಯೂಷನ್ನಿಗೆ ವಿರೋಧವೇನೂ ಆಗುವುದಿಲ್ಲ. ಇದನ್ನು ನೀವು ಕಿವಿಯಲ್ಲಿ ಕೇಳಿ ಇರಕೂಡದು. ನಿಜವಾಗಿಯೂ ರೂರಲ್ ಪಾರ್ಟಿಗಳಿಗೆ ಸೇರಿದ ಪ್ರತಿಯೊಬ್ಬ ಜನಕ್ಕೂ ಈಗ ಕೆಲಸ ಸಿಗುವುದು ಕಷ್ಟವಾಗಿದೆ. ಇದನ್ನು ಪರಿಶೀಲಿಸಿ ನಾಗನ್‌ಗೌಡ ಕಮಿಟಿಯವರು ಅರ್ಬನ್ನು ಏರಿಯಾಕ್ಕೆ ಇಷ್ಟು ಪರ್ಸೆಂಟೇಜು ಮತ್ತು ರೂರಲ್ ಏರಿಯಾಕ್ಕೆ ಇಷ್ಟು ಪರ್ಸಟೆಂಜು ಕೊಡಬೇಕು ಎಂದು ಅವರು ಇನ್ನೂ ಖಚಿತವಾದ ತೀರ್ಮಾನವನ್ನು ತೆಗೆದುಕೊಳ್ಳುವ ಮುನ್ನ ಇದನ್ನು work out ಮಾಡಿ ಜಾಸ್ತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ ಇದರಲ್ಲಿ ಬ್ಯಾಕ್‌ವರ್ಡ ಕಮಿಟಿಯವರಿಗಾಗಿ ಶೇಕಡಾ 45 ಕ್ಕಿಂತ ಮೇಲೆ ಇರುವುದರಿಂದ ಅವರಿಗೆ ಎಂದರೆ ಷೆಡ್ಯೂಲು ಕ್ಯಾಸ್ಟಿನವರಿಗೂ ಕೊಡುವ ಹಾಗೆ ರೂಲ್ಸನಲ್ಲಿ ಮಾಡಬೇಕು. ಈ ವಿಷಯವನ್ನು ನಾಗನಗೌಡ ಕಮಿಟಿಯವರು ಪರಿಶೀಲಿಸಿ ರೂರಲ್ ಪಾರ್ಟ್ಸ್ ಮತ್ತು ಅರ್ಬನ್ ಪಾರ್ಟ್ಸ್ ಎಂದು ಎರಡು ಭಾಗ ಮಾಡಿ ಕೆಲಸಗಳು ಎಲ್ಲರಿಗೂ ಸಿಗುವಂತೆ ಮಾಡಬೇಕು. ಈಗ ಪಬ್ಲಿಕ್ ಸರ್ವಿಸ್ಸು ಕಮಿಷನ್ನಿನವರು ಕೊಡುವಂತಹ ಅಜ್ಜಿಗಳು ನೋಡಿದರೆ ನೂರಕ್ಕೆ 80 ಭಾಗದಷ್ಟು ಅರ್ಬನ್ನು ಏರಿಯಾದ ಜನಕ್ಕೇ ಸಿಗುತ್ತದೆ. ಇದರಿಂದಾಗಿ ಹಳ್ಳಿಗಾಡಿನ ಮಕ್ಕಳಿಗೆ ಮಾತ್ರ ಬಹಳ ಅನ್ಯಾಯ ವಾಗುತ್ತಿದೆ. ಕೋಮಲವಾಗಿ ನೋಡುವಾಗ ಯಾರಿಗೇ ಸಿಗಲಿ, ಬ್ರಾಹ್ಮಣರಿಗೇ

(ಶ್ರೀ ಎಸ್. ಜಿ. ನರಸಿಂಹೇಗೌಡ)

ಆಗಲಿ, ವಕ್ಕಲಿಗರಿಗೇ ಆಗಲಿ ಅಥವಾ ಇನ್ನಿತರರಿಗೇ ಆಗಲ್ಲಿ ಆಯಾ ಕ್ಷೇತ್ರಗಳಿಗನುಸಾರವಾಗಿ ಸಿಗುವಂತೆ ಮಾಡಲಿ ಎಂದು ನಾನು ಸಲಹೆ ಮಾಡುತ್ತೇನೆ.

ಸ್ವಾಮಿ, ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಬಹುಶಃ ನಮ್ಮ ಮಂತ್ರಿಗಳಾದ ಶ್ರೀಮಾನ್ ಚೆನ್ನಬಸಪ್ಪನವರು ಒಂದುಮೇಲೆ ಸತ್ಯವಂತರು ಗಳಿಸಿದ್ದ Efficienay ತೆಗೆದುಕೊಂಡು ಅಧಿಕಾರ ವರ್ಗದಲ್ಲಿರತಕ್ಕ ಜನರಲ್ಲಿ ಹೆಚ್ಚಿನ ಪ್ರೋತ್ಸಾಹ ಮನೋಭಾವನೆ ಬರುವಂತೆ ಮಾಡತಕ್ಕವರಾಗಿದ್ದರು. ನಿಮ್ಮನ್ನು ನಂಬಿಕೊಂಡು ನಮ್ಮ ದೇಶದಲ್ಲಿರುವ ಎರಡು ಕೋಟಿ ಜನರು ನಿಮ್ಮ ಕೈಗೆ ಯಶಸ್ವಿಯಾಗಿ ಆಡಳಿತವನ್ನು ಕೊಟ್ಟು ನಿಮಗೆ ತರಬೇತಾಗುವ ಹಾಗೆ ಮಾಡುವ ಸುಸಮಯವೂ ಬಂದಿದೆ. ಆದರೆ ನೀವು ಏನ್ನು ಮಾಡುತ್ತಿದ್ದೀರಿ ಎಂದರೆ, ಸಮಾಜದ ಹಿತದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ನಾನು ಸಮಾಜಕ್ಕೆ ದೂರವಾದವನು. ತಾವು ಸತ್ಯವಂತರಾಗಿ ಕೆಲಸ ಮಾಡುತ್ತಿದ್ದಂತಹ ಸುಪೀರಿಯರು ಆಫೀಸರುಗಳನ್ನು ಮೊದಲು efficient ಆಗಿದ್ದರು ಎಂದು ಹೇಳಿ ಆದಾದ ಮೂರು ದಿವಸಗಳಲ್ಲಿ inefficient ಆದವರು, ಅವರು obedient ಆಗಿ ಇಲ್ಲಿಯ ವರೆಗೆ ಆಗಿಲ್ಲ ಎಂದು ಹೇಳತಕ್ಕ ವಾದ ಇವತ್ತಿನ ದಿವಸ ನಮ್ಮ ಸರಕಾರದಲ್ಲಿ ಜಾಸ್ತಿಯಾಗಿದೆ. ಈ ರೀತಿಯಾಗಿ ಅನ್ಯಾಯಗಳಾಗುತ್ತಿರುವುದನ್ನು ನಿಜವಾಗಿಯೂ ನೋಡಿದರೆ ಅಧಿಕಾರವರ್ಗದಲ್ಲಿ ಸತ್ಯವಂತರಿಗೆ ನೀವು ಉತ್ತೇಜನ ಕೊಡದಿದ್ದರೆ, ನೀವು ನಿಮ್ಮ ಪ್ರಜೆಗಳ ಸಾಕರ್ಯವನ್ನು ಹೇಗೆ ಮಾಡುವುದಕ್ಕೆ ಸಾಧ್ಯ ?

ನಿಜವಾಗಿ ಶ್ರೀಮಾನ್ ಚೆನ್ನಬಸಪ್ಪನವರು ಈ ಬಗ್ಗೆ ನಿಷ್ಠೆಯಿಂದ ಆರ್ಡರ್ ಮಾಡಿದ್ದಾರೆಯೇ ಅಥವಾ ಅವರು ಸತ್ಯಾಸತ್ಯವನ್ನು ಕಂಡುಹಿಡಿಯತಕ್ಕ ಯೋಜನೆಯನ್ನು ಏನಾದರೂ ಮಾಡಿದ್ದಾರೆಯೇ ಎಂದು ನಾನು ಒಂದು ಪ್ರಶ್ನೆ ಕೇಳುತ್ತೇನೆ. ನಿಜವಾಗಿ ನಿಮ್ಮಲ್ಲಿ ಟೀಕೆ ಮಾಡುವುದಾದರೆ ಆ ರೀತಿ ಟೀಕೆ ಮಾಡುವವರು ಮೊದಲು ಸತ್ಯವಂತನಾಗಿರಬೇಕು. ನರಸಿಂಹೇಗೌಡನಾದ ನಾನು ಸತ್ಯವಂತನಾಗಿದ್ದರೇನೇ ನನ್ನ ವಾಕ್ಯ ವೇದವಾಕ್ಯವಾಗುತ್ತದೆ. ಅದಕ್ಕೆ ನಿಜವಾಗಿ ಬೆಲೆ ಇರುತ್ತದೆ. ಒಂದುವೇಳೆ ನಾನೇ ಅಸತ್ಯವಂತನಾಗಿ ನಡೆದು ನಿಮ್ಮ ಮೇಲೆ ಇಲ್ಲದ ಸಲ್ಲದ ಟೀಕೆಗಳನ್ನು ಮಾಡಿದರೆ ಆ ಎಲ್ಲ ನನ್ನ ಟೀಕೆಗಳು ತಿರುಳಿಲ್ಲದ ಹಾಗೆ ಆಗುತ್ತವೆ. ನೆನ್ನೆ ದಿವಸ ನಾವು ಈ ಸಭೆಯಲ್ಲಿ ಇಲ್ಲದಾಗ ತಾವು ಜವಾಬು ಕೊಟ್ಟರಲ್ಲಾ ಅದು ಯಾವ ಧರ್ಮ ? ನಿಮ್ಮಲ್ಲಿ ಪ್ರಜಾಪ್ರಭುತ್ವದ ತತ್ವವೇನಾದರೂ ಇದ್ದಿದ್ದ ಪಕ್ಷದಲ್ಲಿ ವಿರೋಧಪಕ್ಷದವರು ಬರಲಿ, ಆಮೇಲೆ ಜವಾಬು ಕೊಡೋಣವೆಂದು ಹೇಳುತ್ತಿದ್ದಿರಿ. ಆ ತತ್ವ ನಿಮ್ಮಲ್ಲಿ ಇಲ್ಲವೇ ಇಲ್ಲ. ನೀವು ನಾವು ಇಲ್ಲದಾಗ ಗೋಡೆಗಳ ಮುಂದೆ ಮಾತನಾಡಿದಹಾಗೆ ಮಾತನಾಡಿದ್ದೀರಿ. ಅದರಲ್ಲಿ ಏನಾದರೂ ತತ್ವವಿದೆಯೇ ? ನೀವು ಮಾತನಾಡಿದ ನಂತರ ನಾವು ಅದಕ್ಕೆ ಜವಾಬು ಹೇಳುವುದಕ್ಕೆ ಅವಕಾಶವನ್ನು ನಮಗೆ ಕಲ್ಪಿಸಿಕೊಟ್ಟಿದ್ದಾರೆ ಅದು ಎಷ್ಟು ಶೋಭಾಯಮಾನವಾಗುತ್ತಿತ್ತು !

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಶಾಖೆಯ ಮಂತ್ರಿಗಳು).— ನೀವು ನಿಜವಾಗಿ ಇಲ್ಲ ಆ ಸಂದರ್ಭದಲ್ಲಿ ಇದ್ದಿದ್ದರೆ, ನಮ್ಮ ಸೂಕ್ತ ಜವಾಬನ್ನು ಸಹನೆಯಿಂದ ನೀವು ಕೇಳುವುದಕ್ಕಾಗುತ್ತಿರಲಿಲ್ಲವೆಂದೇ ಹೊರಟು ಹೋಗಿದ್ದೀರಿ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಸ್ಪೀಕರ್ ಅವರು ಅವಕಾಶಕೊಟ್ಟಿದ್ದರೆ ಆಗುತ್ತಿತ್ತು. ಸ್ಪೀಕರ್ ಅವರು ರೂಲಿಂಗ್ ಹಾಕಿದಮೇಲೆ ಏನು ಮಾಡುವುದು ? ಅವರ ಮಾತಿಗೆ ಮನ್ನಣೆಯನ್ನು ನೀವೂ ಕೊಡಬೇಕು, ನಾವೂ ಕೊಡಬೇಕು. ಅವರ ರೂಲಿಂಗ್‌ಮೇಲೆ ನಾವು ಇಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದು ಹೊರಟುಹೋಗಿದ್ದು. ನಾವು ಇದ್ದಾಗ ನೀವು ಜವಾಬು ಕೊಟ್ಟಿದ್ದರೆ ನಿಜವಾಗಿ ನಿಮ್ಮ ಒಂದೊಂದು ಮಾತಿಗೂ ಚೆನ್ನಾಗಿ ನಮ್ಮವರು ಜವಾಬು ಕೊಡುತ್ತಿದ್ದರು ಈಗ ನೀವು ಹೇಳಿದ್ದು ಎಲ್ಲವೂ ಗೋಡೆ ಮುಂದೆ ಕೂತು ಹೇಳಿದ ಹಾಗಾಯಿತು. ಇದು

ನಿಮ್ಮಲ್ಲಿ ಇರಬಾರದು. ನಮ್ಮ ದೇಶದಲ್ಲಿ ಸರ್ಕಾರ ನಿಜವಾಗಿ ವಿರೋಧಪಕ್ಷವನ್ನು ಮುಂದೆಯೂ ರಚಿಸಬೇಕಾದರೆ ನಮಗೆ ಹೇಗೆ ಅಡ್ವೈಸ್ ಮಾಡಬೇಕೆಂಬುದನ್ನು ನೀವು ಮೊದಲು ಕಲಿಯಬೇಕು. ಅದನ್ನು ಮರೆಯಬಾರದು. ಇದು ಅತಿ ಮುಖ್ಯವಾದ ವಿಷಯ.

ಇನ್ನು ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿರತಕ್ಕ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ನಿಜವಾಗಿ ಈಗಿರತಕ್ಕ ಇದಕ್ಕೆ ಸಂಬಂಧಪಟ್ಟ ಮಂತ್ರಿ ಮತ್ತು ಇತರ ಮಂತ್ರಿಗಳ ಜಂಟೀ ಜವಾಬ್ದಾರಿ ಇದ್ದೇ ಇದೆ. ದೇಶದಲ್ಲಿ ಎಫಿಷಿಯನ್ಸಿ ಉಳಿಯಬೇಕಾದರೆ ನಾವೆಲ್ಲರೂ ನ್ಯಾಯಕ್ಕೆ ಬೆಲೆಕೊಡಬೇಕು. ಅದನ್ನು ನೀವು ಮರೆತಿದ್ದೀರಿ. ಆ ಇಲಾಖೆಯಲ್ಲಿ ನ್ಯಾಯವೆಂಬುದು ಇಲ್ಲವೇ ಇಲ್ಲ, ಅದಕ್ಕೋಸ್ಕರವಾಗಿಯೇ ಜನ ಸರ್ಕಾರದ ಆಡಳಿತವನ್ನು ನಡೆಸಲಿಕ್ಕೆ ನೀವು ಲಾಯಕ್ಕಾಗಿಲ್ಲ. ಈ ಕೆಲಸ ಬಿಟ್ಟು ಅದನ್ನು ವಿರೋಧ ಪಕ್ಷದವರಿಗೆ ಕೊಡಿ ಎಂದು ನಿಮಗೆ ಹೇಳುತ್ತಿರುವುದು. ಇದನ್ನು ಆಡಳಿತ ಪಕ್ಷದವರು ಚೆನ್ನಾಗಿ ಗಮನದಲ್ಲಿಟ್ಟುಕೊಂಡಿರಬೇಕು.

ಅಧ್ಯಕ್ಷರು.—ಅದೆಲ್ಲವೂ ನಿನ್ನೆಯ ವಿಷಯವಾಯಿತು. ಮುಂದೆ ಮಾತನಾಡುವುದಕ್ಕೆ ತಮಗೆ ಮತ್ತೆ ಬೇರೆ ಅವಕಾಶವಿದೆ. ಆಗ ಮಾತನಾಡಿ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇತರರ ಮೇಲೆ ನಿಮಗೆ ಹೆಚ್ಚಿನ ಅಭಿಮಾನವಿದೆಯೇ ಹೊರ್ತು ನನ್ನ ಮೇಲೆ ಏಕೆ ಅಷ್ಟಾಗಿ ಅಭಿಮಾನ ವಿಲ್ಲವೋ ನನಗೆ ಗೊತ್ತಿಲ್ಲ. ನನಗೆ ಸಾಕಷ್ಟು ಮಾತನಾಡಲು ಅವಕಾಶವನ್ನು ತಾವು ಕೊಡಬೇಕು.

ಅಧ್ಯಕ್ಷರು.—ನನಗೆ ಎಲ್ಲರ ಬಗ್ಗೆಯೂ ಒಂದೇರೀತಿಯಾದ ಅಭಿಮಾನವಿದೆ. ಆದರೆ ರೂಲ್ಸ್ ಪ್ರಕಾರ ತಮಗೂ 20–25 ನಿಮಿಷಗಳ ಕಾಲ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನನಗೆ ಒಂದು ಘಂಟೆ ಕಾಲಾವಕಾಶ ವಿಲ್ಲದಿದ್ದರೆ ನಾನೇನು ಹೇಳಬೇಕು ! ಮುಖ್ಯವಾಗಿ ನಾವು ಅವರನ್ನು ನಮ್ಮ ಜೊತೆಗೆ ಎಳೆದುಕೊಳ್ಳಬೇಕು. ನಮ್ಮಲ್ಲಿ ಸಹಕರಿಸಿ ಅವರು ಕೆಲಸ ಕಾರ್ಯಗಳನ್ನು ಮಾಡಬೇಕೇ ಹೊರ್ತು ನಾವು ಇಲ್ಲದಿದ್ದರೆ ಸರ್ಕಾರಿ ಆಡಳಿತವನ್ನು ನಡೆಸುವುದಕ್ಕೆ ಅವರಿಗೆ ಆಗುವುದೇ ಇಲ್ಲ. ಏಕೆಂದರೆ ಇದ್ದಕ್ಕಿದ್ದ, ಹಾಗೆಯೇ ಅವರವರಲ್ಲೇ ಒಳಜಗಳಗಳು ಷುರು ಆಗುತ್ತವೆ. ವಿರೋಧಪಕ್ಷದವರು ಅದಕ್ಕೋಸ್ಕರವೇ ಇರಲೇ ಬೇಕೆನ್ನುವುದು. ಖಂಡಿತವಾಗಿ 1962 ನೇ ಇಸವಿಯಾದ ಮೇಲೆ ಪಿ. ಎಸ್. ಪಿ. ಸರ್ಕಾರ ಬಂದೇ ಬರುತ್ತದೆ. ಏಕೆಂದರೆ ಈಗ ಜನತೆಗೆ ಪಿ. ಎಸ್. ಪಿ. ಯವರಲ್ಲ ಹೆಚ್ಚಿನ ನಂಬಿಕೆ ವಿಶ್ವಾಸವಿದೆ.

ಒಬ್ಬ ಸದಸ್ಯರು.—ಎಲ್ಲಿ ಬರುತ್ತದೆ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಮೈಸೂರಿನಲ್ಲಿ. ಪಿ. ಎಸ್. ಪಿ. ಸರ್ಕಾರ ಖಂಡಿತವಾಗಿ ಮುಂದೆ ಬರುತ್ತದೆ. ಖಂಡಿತವಾಗಿ ಜನಗಳು ಆ ಸರ್ಕಾರವನ್ನು ಮೆಚ್ಚುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ಆಗ ಕಾಂಗ್ರೆಸ್ ಏನು ಮಾಡುತ್ತದೆಂಬುದನ್ನು ಜನಗಳೂ ತಿಳಿದು ಕೊಳ್ಳುತ್ತಾರೆ. ನೀವೂ ತಿಳಿದುಕೊಳ್ಳುತ್ತೀರಿ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಶ್ರೀಮಾನ್ ಜತ್ತಿಯವರು ಹೇಳಿದ ಮಾತಿಗೆ ಆರೀತಿ ನಡೆಯುತ್ತದೆ ಎಂಬುದಾಗಿ ನನಗೆ ನಂಬಿಕೆ ಇಲ್ಲ. ಖಂಡಿತವಾಗಿ ಪಿ. ಎಸ್. ಪಿ. ಸರ್ಕಾರ ಮುಂದೆ ಬರುವುದೇನೋ ನಿಜ. ನಾನು ಅನೇಕ ತಾಲ್ಲೂಕ್ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಓಡಾಡಿರುವನಾದ್ದರಿಂದ ಒಟ್ಟಿನಲ್ಲಿ ಅಲ್ಲಿನ ಜನರ ಅಭಿಪ್ರಾಯ ಏನಿದೆಯೆಂದರೆ ಈ ಕಾಂಗ್ರೆಸ್ ಸರ್ಕಾರ ದೇಶದ ಜನತೆಯಲ್ಲಿ ಈಗಾಗಲೇ ವಿಶ್ವಾಸವನ್ನು ಕಳೆದುಕೊಂಡಿದೆ ಎಂಬುದಾಗಿ ತಿಳಿದು ಬರುತ್ತಿದೆ.

Sri T. Mariappa.—He obviously forgets what his leader Sri Ashok Mehta said that they can only think of power in the post-Nehru period.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇನ್ನು ನಾನು ನನ್ನ ಸ್ನೇಹಿತರಾದ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀಮಾನ್ ಸುಬ್ರಹ್ಮಣ್ಯ ಅವರು ರಚಿಸಿರತಕ್ಕ ಕಾನೂನುಗಳ ಬಗ್ಗೆ ಎಲ್ಲವನ್ನೂ ವರ್ಣಿಸುವುದಕ್ಕೆ ಅಸಾಧ್ಯ. ಪ್ರತಿಯೊಂದು ತಾಲ್ಲೂಕ್ ಪ್ರೆಸಿಡೆಂಟ್ ಅವರಿಗೆ ಮಾಹೆಯಾನ ಅವರ ಟಿ. ಎ. ಮತ್ತು ಡಿ. ಎ. ಎಂದು 250 ರೂಪಾಯಿಗಳಷ್ಟು ಸಂಭಾವನೆ ಕೊಡಬೇಕು ಎಂದು ಸರ್ಕಾರದವರು ಯೋಚಿಸಿದ್ದಾರೆಂದು ನನಗೆ ತಿಳಿದು ಬಂತು. ಆದರೆ ನಾನು ತಿಳಿದುಕೊಂಡಿರುವ ಹಾಗೆ ಅದು ಇನ್ನೂ ಆರ್ಡರ್ ಆಗಿಲ್ಲವೆಂದು ಕಾಣುತ್ತದೆ. ಇದರಿಂದ ಸರ್ಕಾರಕ್ಕೆ ಒಳ್ಳೆಯದಾಗುವುದಿಲ್ಲ. ಈ ರೀತಿಯಾಗಿ ಮಾಡುವುದು ಸರಿಯಲ್ಲ. ತಾಲ್ಲೂಕಿನ ಪ್ರಜೆಗಳು ಕಂದಾಯ, ಇತರ ಸೆಸ್ಸುಗಳನ್ನು ಎಷ್ಟೋ ಕೊಡುತ್ತಿರುವಾಗ, ಅವರಿಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡದೆ ಈ ರೀತಿ ಆ ಹಣವನ್ನು ಬೇರೆ ಬೇರೆ ಬಾಬಿಗೆ ವ್ಯಯಮಾಡುವುದನ್ನು ನಾನು ಒಪ್ಪುವುದಿಲ್ಲ. ಆ ರೀತಿ ಮಾಡಬೇಡಿ ಎಂದು ನಾನು ಸಲಹೆ ಮಾಡುತ್ತೇನೆ.

Sri M. C. Narasimhan.—The Chief Minister has publicly referred to this proposal in a meeting.

†ಶ್ರೀ ಟಿ. ಸುಬ್ರಹ್ಮಣ್ಯ.—ಈ ವಿಷಯದಲ್ಲಿ ನನಗೆ ಅನೇಕ ತರಹ ಸಲಹೆಗಳು ಬಂದಿವೆ. ಕೆಲವರಿಂದ ಈ ಸಂಭಾವನೆಯನ್ನು ಕೊಡಲೇಬಾರದು ಎಂದು ಬಂದಿದೆ. ಕೊಟ್ಟರೆ 75 ಕೊಡಿ, 100 ಕೊಡಿ 150 ಕೊಡಿ ಇಲ್ಲವೇ 250 ಕೊಡಿ ಎಂದು ಬಂದಿದೆ. ಆದರೆ ನಾನು ಆ ವಿಷಯದಲ್ಲಿ ಇನ್ನೂ ತೀರ್ಮಾನ ಮಾಡಲಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನೀವು ತೀರ್ಮಾನ ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ಆ ವಿಷಯದಲ್ಲಿ ತಮಗೆ ಎಷ್ಟು ತೀವ್ರವಾದಂಥ ಅಭಿಪ್ರಾಯವಿದೆಯೋ ನಮಗೂ ಅಷ್ಟೇ ಇದೆ. ಅದನ್ನು ಯೋಚನೆ ಮಾಡಿ ತೀರ್ಮಾನ ಮಾಡಬೇಕಾದುದು ಈಗ ಇರತಕ್ಕ ವಿಚಾರ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಸಲಹೆಗಳು ಬಂದಿರುವುದನ್ನೆಲ್ಲಾ ನೋಡಿ. ಆದರೂ ವಿಶೇಷ ಹಣ ಈ ಬಗ್ಗೆ ವ್ಯಯವಾಗುವರೀತಿ ಮಾಡಬಾರದು. ನಿಜವಾಗಿ ಸರ್ಕಾರದವರು ಅವರಿಗೆ ಟಿ. ಎ. ಮತ್ತು ಡಿ. ಎ. ಗಾಗಿ ಮಾತ್ರ ಕೊಡುತ್ತೇವೆಂದು ಹೇಳಿ ಹೆಚ್ಚಿಗೆ ಸಂಭಾವನೆಯನ್ನು ಕೊಡುವುದಕ್ಕೆ ಅವಕಾಶವನ್ನು ಖಂಡಿತವಾಗಿ ಕೊಡಬಾರದು.

ಇನ್ನೊಂದು ವಿಷಯ ಈಗಾಗಲೇ ನಮ್ಮ ಜಿಲ್ಲೆಯಲ್ಲಿ ರೈತರು ಅನೇಕ ತರಹ ತೆರಿಗೆಗಳನ್ನು ಕೊಡುತ್ತಿದ್ದಾರೆ. ಕಂದಾಯದ ರೂಪದಲ್ಲಿ ತಾಲ್ಲೂಕ್ ಬೋರ್ಡಿಗೆ ನೇರವಾಗಿ ಶೇ. 20 ರಂತೆ ಸೆಸ್ಸನ್ನು ಕೊಡುತ್ತಿದ್ದಾರೆ. ಅಂಥಾದ್ದರಲ್ಲಿ ನಮ್ಮ ಜಿಲ್ಲಾ ಬೋರ್ಡಿನವರು ಮತ್ತು ತಾಲ್ಲೂಕ್ ಬೋರ್ಡಿನವರು ಬೇರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇನ್ನು ಮುಂದೆ ರಿಜಿಸ್ಟ್ರೇಷನ್ ಮೇಲೆ ಶೇ. 3ರಂತೆ ಅಡಿಷನಲ್ ಟ್ಯಾಕ್ಸ್ ಹಾಕಬೇಕು ಎಂದು ನಿರ್ಣಯವನ್ನು ಬೇರೆಮಾಡಿದ್ದಾರೆ. ಅಂಥಾದ್ದಕ್ಕೆ ಸರ್ಕಾರದವರು ನಿಜವಾಗಿ ಮನ್ನಣೆ ಕೊಡುವುದಾದರೆ ಅದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ಗ್ರಾಮಗಳಲ್ಲಿ ಸರಿಯಾಗಿ ಮಳೆಯಾಗದ ಆರ್ಥಿಕ ಮಟ್ಟ ಕೆಟ್ಟು ಹೋಗಿ ರೈತರು ಕಂಗೆಟ್ಟು ಕುಳಿತಿದ್ದಾರೆ. ಇಂಥಾದ್ದರಲ್ಲಿ ಅವರ ಮೇಲೆ ಈ ಬಗ್ಗೆ ಶೇ. 3 ರಂತೆ ಆಡಿಷನಲ್ ಟ್ಯಾಕ್ಸ್ ಹಾಕಬೇಕು ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಇಂತಹ ನಿರ್ಣಯ ಸರ್ಕಾರಕ್ಕೆ ಬಂದರೂ ಅಂಥಾದ್ದನ್ನು ಸರ್ಕಾರದವರು ಅಪ್ರೂವ್ ಮಾಡಬಾರದು ಎಂದು ನಾನು ಸಲಹೆಮಾಡುತ್ತೇನೆ.

3-00 P.M.

ಸ್ವಾಮಿ ನಮ್ಮ ರಾಜ್ಯದ ಹಿಂದಿನ ಬಡ್ಜೆಟ್ ಪ್ರಕಾರ, ರಾಜ್ಯದ ಉತ್ಪತ್ತಿ 65 ಕೋಟಿ ರೂಪಾಯಿ ಇದೆ. ಇದರಲ್ಲಿ ಮೊದಲನೆಯ ಖರ್ಚು ಎಂದರೆ Establishment charges ಅದು ಸುಮಾರು 32ಕೋಟಿ ರೂಪಾಯಿ ಇದೆ. ಈಗ ಸಂಬಳ ಸಾರಿಗೆಗಳು ರಿವೈಸ್ ಆಗಿರುವು ದರಿಂದ, ಆ ಖರ್ಚು 3½ ಕೋಟಿರೂಪಾಯಿ ಜಾಸ್ತಿಯಾಗುತ್ತದೆ. ಒಟ್ಟಿನಲ್ಲಿ ಸುಮಾರು 35½ ಕೋಟಿ ರೂಪಾಯಿ ಎಸ್ಟಾಬ್ಲಿಶ್‌ಮೆಂಟಿನಲ್ಲಿ ಖರ್ಚು ಮಾಡಬೇಕಾಗತ್ತದೆ. ಹೋದವರ್ಷ 7½ ಕೋಟಿ ರೂಪಾಯಿಗೆ ಸಾಲಕ್ಕೆ ಬಡ್ಡಿಗೆ ಕೊಟ್ಟಿವೆ; ಈ ವರ್ಷದ ಬಜೆಟ್ಟಿನಲ್ಲಿ ಬಹುಶಃ ಅದು 10 ಕೋಟಿಗೆ ಏರಬಹುದು. ಹೀಗೆ ಸುಮಾರು 45½ ಕೋಟಿ ರೂಪಾಯಿ ಇತರೇ ಚಾರ್ಜಸ್ಸಿಗೇ ಹೋಗಿ ನಿಜವಾಗಿ ರೈತರಿಗೆ ಮತ್ತು ಹಳ್ಳಿ ಗಾಡಿನವರಿಗೆ ಒಂದು ನ್ಯಾಯವಾದ ಆರ್ಥಿಕ ಯೋಜನೆಯನ್ನು ಹಾಕಿಲ್ಲ.

ಒಬ್ಬ ಸದಸ್ಯರು.—ಸಂಬಳ ಜಾಸ್ತಿ ಕೊಡಿ ಎಂದು ಹೇಳುತ್ತೀರಾ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಸಂಬಳ ಕೊಡಬಾರದೆಂದು ಹೇಳುತ್ತಿಲ್ಲ. 2 ಸಾವಿರ, 3 ಸಾವಿರ ರೂಪಾಯಿ ಸಂಬಳ ಕೊಡುವುದನ್ನು ಒಂದು ಸಾವಿರ ರೂಪಾಯಿಗೆ ಇಳಿಸಿ ಅದರಲ್ಲಿ ಉಳಿತಾಯವಾದ ಖರ್ಚನ್ನು ಹಳ್ಳಿಗಾಡಿನ ಅಭಿವೃದ್ಧಿಗೋಸ್ಕರ ಉಪಯೋಗಿಸಿ ಅವರಿಗೆ ನೇರವಾಗಿ ಹಳ್ಳಿಗಾಡಿನವರ ಅಭಿವೃದ್ಧಿಗೆ ಏನು ಸ್ಕೀಮು ಹಾಕಿದ್ದೀರಿ ?

ಅಧ್ಯಕ್ಷರು.—ಗೆಜೆಟೆಡ್ ಆಫೀಸರ ಸಂಬಳಕ್ಕೆ ಎಷ್ಟು ಹಣ ಹೋಗುತ್ತದೆ ?

ಶ್ರೀ ಟಿ. ಮರಿಯಪ್ಪ.—ಗೆಜೆಟೆಡ್ ಆಫೀಸರ ಕಡೆಯಿಂದ ಒಂದು ಲಕ್ಷ ಉಳಿಸುವುಕ್ಕಾಗುವುದಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.— 46 ಕೋಟಿ ರೂಪಾಯಿ ಸಂಬಳ ಸಾರಿಗೆ ಮತ್ತಿತರ ಚಾರ್ಜಸ್ಸಿಗೆ ಹೋಗಿ ಇನ್ನುಳಿಯುವ 20 ಕೋಟಿ ರೂಪಾಯಿಯಲ್ಲಿಯೂ 900 ತಾತ್ಕಾಲಕ್ಕೆ ಕಮಿಟಿಗಳ ಖರ್ಚು ಜಾತ ಹೋಗಿ, ರೈತರಿಗೋಸ್ಕರ ಯಾವ ಸ್ಕೀಮು ಸಕ್ಸಸ್‌ಫುಲ್ಲಾಗಿ ಮಾಡಿದ್ದೀರಿ? ಬರತಕ್ಕಂಥ ಟ್ಯಾಕ್ಸಿನಲ್ಲಿ ಏನು ಯೋಜನೆಯನ್ನೂ ಹಾಕಿಲ್ಲ.

Mr. SPEAKER.—The House will now rise and meet after half-an-hour.

The House adjourned for recess at Five Minutes past Three of the Clock and reassembled at Forty Minutes past Three of the Clock.

[Mr. SPEAKER in the Chair]

ಶ್ರೀ ಎಚ್. ಜಿ. ನರಸಿಂಹೇಗೌಡ.—ಸ್ವಾಮಿ ಈಗಾಗಲೇ ನಮ್ಮ ಪಾರ್ಟಿ ವಿಫ್ ಅವರು ನನಗೆ ಭಾಷಣವನ್ನು ಜಾಗ್ರತೆ ಮುಗಿಸಬೇಕೆಂದು ಹೇಳಿರುವುದರಿಂದಲೂ ಮತ್ತು ಅಧ್ಯಕ್ಷರ ಅಪ್ಪಣೆಗೆ ತೀರ್ಮಾನಕ್ಕೆ ತಲೆ ಬಾಗಬೇಕಾಗಿರುವುದರಿಂದಲೂ ನಾನು ನನ್ನ ಭಾಷಣವನ್ನು ಆದಷ್ಟು ಜಾಗ್ರತೆ ಮುಗಿಸುತ್ತೇನೆ.

ಸ್ವಾಮಿ, ವಿರೋಧಪಕ್ಷದವರು ಮಾಡಿರತಕ್ಕ ಟೀಕೆಗಳಿಗೆ ಉತ್ತರ ಕೊಡತಕ್ಕ ಶಕ್ತಿ ಅರ್ಹತೆ ಕಾಂಗ್ರೆಸ್ ಪಾರ್ಟಿಯಲ್ಲಿ ಯಾರಿಗಾದರೂ ಇದೆಯೇ ಎಂಬುದನ್ನು ಪ್ರಶ್ನಿಸತಕ್ಕ ಕಾಲದಲ್ಲಿ ಅದೇ ಕಾಂಗ್ರೆಸ್‌ಪಕ್ಷದವರು ಅವರ ಪಕ್ಷದಮೇಲೆ ಅನೇಕ ಅಪಾದನೆಗಳನ್ನು ತಂದಿದ್ದಾಗ ಅಪಾದಿತ ಗುಂಪಿನಲ್ಲಿ ನಾಲ್ಕು ಜನರಿಗೆ ಮಂತ್ರಿ ಪದವಿ ಕೊಡುತ್ತೇವೆಂದು ಹೇಳಿದ ಕೂಡಲೆ ಆ ಅಪಾದ ನೆಗಳೆಲ್ಲಾ ಮಾಯವಾಗಿ ಬಿಟ್ಟವು. ಹೀಗೆ ಆಡಳಿತ ಪಕ್ಷದವರು ಒಂದು ಕಡೆ ದೇಶದಲ್ಲಿ ಆರ್ಥಿಕ

(ಶ್ರೀ ಎಚ್. ಜಿ. ನರಸಿಂಹೇಗೌಡ)

ಮುಗ್ಗಟ್ಟು ಹೆಚ್ಚಾಗಿದೆ, ಆಡಳಿತದಲ್ಲಿ ಆಗತಕ್ಕ ಖರ್ಚು ವೆಚ್ಚಗಳನ್ನು ಕಡಮೆ ಮಾಡಬೇಕೆಂದು ಹೇಳಿ ಸಮಿತಿಗಳನ್ನು ನೇಮಿಸುತ್ತ ಅದೇ ಕಾಲದಲ್ಲಿ ಮತ್ತೊಂದು ಕಡೆ ಮಂತ್ರಿ ಮಂಡಳವನ್ನು ಹೆಚ್ಚಿಸಿಕೊಂಡು ಹೋಗುತ್ತಿರುವ ಈ ಕಾಂಗ್ರೆಸ್ ಸರ್ಕಾರಕ್ಕೆ ಯಾವುದಾದರೂ ಒಂದು ನೀತಿ ಇದೆಯೇ ಎಂತ ಕೇಳುತ್ತೇನೆ ? ವಿರೋಧಪಕ್ಷದವರು ಮಾಡಿರತಕ್ಕ ಟೀಕೆಗಳ ಬಗ್ಗೆ ನಮ್ಮ ನೀತಿ ಏನಿದೆ, ಇಂಥ ಆಡಳಿತ ನಡೆಸತಕ್ಕ ಕಾಂಗ್ರೆಸ್ ಪಾರ್ಟಿಯವರು ನೀತಿ ಏನಿದೆ ಎಂಬುದನ್ನು ನಾವೀಗ ಇಲ್ಲಿ ತಿಳಿಸಬೇಕಾಗಿಲ್ಲ; ನಾಳೆ ದೇಶದ ಜನರು ಏನು ಹೇಳುತ್ತಾರೆಂಬುದನ್ನು ಕೇಳಿ, ಗೊತ್ತಾಗುತ್ತದೆ. ಆದರೆ ಕಾಂಗ್ರೆಸ್ ಪಕ್ಷದವರು ಈ ದಿವಸ ಒಂದು ಐಕ್ಯಮತ್ಯಕ್ಕೆ ಬಂದಿದ್ದಾರೆಂದು ಯಾರಾದರೂ ಭಾವಿಸಿದ್ದರೆ ಅದು ಸರಿಯಲ್ಲ. ಅವರಲ್ಲಿ ಭಿನ್ನಾಭಿಪ್ರಾಯ ಇರತಕ್ಕ ಜನರು ಇದ್ದಾರೆ. ಅವರಲ್ಲಿ ಅಸೂಯೆ, ಅಸಂತೋಷ ತುಂಬಿತುಳುಕುತ್ತಿದೆ. ಈ ದೋಷವಿಲ್ಲದ ಜನರು ನಾಲ್ಕಾರಿದ್ದರೆ ಹೆಚ್ಚಾಯಿತು. ಅವರ ಪಾರ್ಟಿಯವರೇ ಈ ಆಡಳಿತಕ್ಕೆ ತಲೆ ಬಾಗದಿರುವಾಗ ಅವರು ನಮ್ಮನ್ನು ಅವರ ಆಡಳಿತಕ್ಕೆ ತಲೆ ಬಾಗಲೇಬೇಕೆಂದರೆ ಅದು ಹೇಗೆ ಸಾಧ್ಯವಾದೀತು ?

ಕಾಂಗ್ರೆಸ್ ಮೂಲತತ್ವವೇನಿದೆಯೋ ಆ ಪ್ರಕಾರ ನಡೆಯುತ್ತಿಲ್ಲ. ನಿಮ್ಮಲ್ಲೇ ತತ್ವವಿಲ್ಲದೆ ಇರುವಾಗ ನಮಗೆ ಹೇಳುವುದಾದರೂ ಏನಿದೆ ? ದೇಶದ ಹಣ ಕಾಸನ್ನು ಹಾಳು ಮಾಡಿ ಪ್ರಜಾಪ್ರಭುತ್ವವನ್ನು ಅಳಿಸಿ, law and order break ಮಾಡಿ, ರಾಜ್ಯಾಂಗವನ್ನು ಬಿಟ್ಟು ಅದ್ಯಕ್ಷತೆಗೆ ಮಾರ್ಗ ಮಾಡಿಕೊಳ್ಳುತ್ತಿದ್ದೀರಿ. ತಮ್ಮಲ್ಲಿ ಸ್ವಾರ್ಥ ಜಾಸ್ತಿಯಾಗುತ್ತಿದೆ. ಇಂಥವರು ನಮಗೆ ಹೇಳುವುದರಲ್ಲಿ ಏನು ಸತ್ಯಾಂಶವಿದೆ. ಇದೆಲ್ಲ ತಿರುಳಿಲ್ಲದ ವಾದ. ಕಾಂಗ್ರೆಸ್ನವರು ದೇಶವನ್ನು ಆಳತಕ್ಕ ಶಕ್ತಿಯನ್ನು ಪೂರ್ಣವಾಗಿ ಕಳೆದುಕೊಂಡಿದ್ದೀರಿ.

ಬಹು ಮುಖ್ಯವಾದ ವಿಚಾರವೆಂದರೆ ಹಳ್ಳಿಯ ಜನಗಳ ಉದ್ಧಾರಕ್ಕೆ ಮಹಾತ್ಮಾಜಿಯವರು ಏನು ಹೇಳುತ್ತಿದರೋ ಅದನ್ನು ಪಾಲಿಸುವುದರಲ್ಲಿ ತಪ್ಪು ಹೆಜ್ಜೆಯನ್ನಿಟ್ಟಿದ್ದೀರಿ. ಪಾನ ನಿರೋಧವನ್ನು ಜಾರಿಗೆ ತರುವುದರಲ್ಲಿ ವಿಫಲರಾಗಿದ್ದೀರಿ. ಕುಡುಕರ ಸಂಖ್ಯೆ ಜಾಸ್ತಿಯಾಗುತ್ತಿದೆ. ದೇಶದ ಉತ್ಪತ್ತಿ ಹಾಳಾಗುತ್ತಿದೆ. ಶಾಂತಿಪಾಲನೆ ಮಾಡಬೇಕಾದ ಪೋಲೀಸಿನವರೇ ತಪ್ಪುದಾರಿಗೆ ಹೋಗುತ್ತಿದ್ದಾರೆ. ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಹಾಸನ ಜಿಲ್ಲೆಯಿಂದ ನಾಲ್ಕು ಸಾವಿರ ಕೇಸುಗಳನ್ನು ಹಾಕಿದ್ದಾರೆಂದು ತಿಳಿಸಿದರು. ಇದರ ಅರ್ಥವೇನು? ಹಾಸನ ಜಿಲ್ಲೆಯಲ್ಲಿ ಪೋಲೀಸಿನವರೇ ಕುಡಿಯುತ್ತಿದ್ದಾರೆ. ಈ ವಿಚಾರವಾಗಿ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ, ಡೆಪ್ಯುಟೀಕಮೀಷನರಿಗೂ ಹೇಳಿದ್ದೇನೆ. ಪೋಲೀಸಿನವರೇ ಕುಡಿದು raid ಮಾಡುತ್ತಾ ಇದ್ದುದನ್ನು ನಾಲ್ಕು ದಿನಗಳಹಿಂದೆ ತಾನೇನೋಡಿದ್ದೇನೆ. ಅಧಿಕಾರವನ್ನು ಮೇಲ್ಮಟ್ಟದವರು ಚಲಾಯಿಸದೆ ಇದ್ದರೆ ದರ್ಪ ವಿಲ್ಲದೆ ಇದ್ದರೆ ನಿಮ್ಮ ಕೈ ಕೆಳಗೆ ಇರುವ ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆ. ಸಾರ್ವಜನಿಕ ಶಾಂತಿಗೆ ಭಂಗವುಂಟಾಗದಂತೆ ಹೇಗೆ ನೋಡಿ ಕೊಳ್ಳುತ್ತಾರೆ? ನಿಮ್ಮ ಆಜ್ಞೆಯನ್ನು ನಿಮ್ಮ ಕೈ ಕೆಳಗಿನ ಅಧಿಕಾರಿಗಳು ಪಾಲಿಸುವುದಿಲ್ಲವೆಂದರೆ ನೀವು ಮಂತ್ರಿಗಳಾಗಿ ಏಕೆ ಇರಬೇಕು ? ರಾಜೀನಾಮೆ ಕೊಟ್ಟು ಹೋಗಬೇಕು. ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಅದಲ್ಲಿಯೂ ಮುಖ್ಯವಾಗಿ ನುಗ್ಗೆಹಳ್ಳಿ ಹೋಬಳಿಯಲ್ಲಿ ಅರಸೀಕೆರೆ ತಾಲ್ಲೂಕಿನಲ್ಲೂ ಪಾನ ನಿರೋಧದ ಆಜ್ಞೆ ಸರಿಯಾಗಿ ಜಾರಿಯಲ್ಲಿಲ್ಲ ಮಂತ್ರಿಗಳು ಮಾಡಿದ ಆರ್ಡರಿಗೆ ಗೌರವಕೊಡದೆಯಿರುವ ಅಧಿಕಾರಿಗಳಿದ್ದರೆ ನೀವು ಮಂತ್ರಿಗಳಾದುದಕ್ಕೆ ಏನು ಸಾರ್ಥಕ? ಒಂದು ಆರ್ಡರ್ ಮಾಡಿದರೆ ಏನು ಮಹಾದೊಡ್ಡದೆಂದು ಕೇಳಬೇಕು ಎಂಬುದೇನು ಎಂದು ಹೇಳುತ್ತಾರೆ. ಯಾರೇ ಮಂತ್ರಿಗಳಾಗಿರಲಿ ಅವರ ಆಜ್ಞೆಯನ್ನು ಕೈ ಕೆಳಗಿರುವ ಅಧಿಕಾರಿಗಳು ಸರಿಯಾಗಿ ಪರಿಪಾಲಿಸಿಕೊಂಡು ಹೋಗಬೇಕು. ಆದರೆ ಅವರು ಹಾಗೆ ಮಾಡದೆಯಿರುವುದರಿಂದ ತಮ್ಮ ಅಧಿಕಾರವನ್ನು ತಾವು

ಕಳೆದು ಕೊಂಡಿದ್ದಿರಿ. ಹಾಸನಜಿಲ್ಲೆಯಲ್ಲಿ ಪಾನ ನಿರೋಧ ವಿದ್ದಾಗ್ಯೂ ಹೆಚ್ಚು ಕಳ್ಳ ಭಟ್ಟಿ ತಯಾರಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕಾಗಿಲ್ಲ. ಪೋಲಸಿನವರೇ ಕುಡಿಯುತ್ತಾರೆ ಮತ್ತು ಮಾರಾಟ ಮಾಡುತ್ತಾರೆ. ಇದನ್ನೆಲ್ಲ ಅಧಿಕಾರ ವರ್ಗದವರ ಗಮನಕ್ಕೆ ತಂದಿದ್ದರೂ ಇನ್ನೂ ನಿಂತಿಲ್ಲ. ಮೊನ್ನೆಯದಿವಸ ನಾನು ಎಲ್ಲಿಯೋ ಹೋಗುತ್ತಿದ್ದಾಗ ನನ್ನ ಮುಂದೆಯೇ ಪೋಲಿಸಿನವರು ಕುಡಿದು ನುಗ್ಗೇಹಳ್ಳಿಯಲ್ಲಿ raid ಮಾಡಿಕೊಂಡು ಹೋಗುತ್ತಿದ್ದ ದೃಶ್ಯವನ್ನು ನಾನೇ ನೋಡಿದ್ದೇನೆ. ಇಂಥದನೆಲ್ಲ ತಡೆಗಟ್ಟಬೇಕು.

ನಿಮ್ಮಲ್ಲಿ ಸ್ವಾರ್ಥಿಗಳು ಬಹಳ ಜಾಸ್ತಿಯಾಗಿ, ದೇಶದ ಅಭ್ಯುದಯವನ್ನು ಮರೆತು ತಮ್ಮ ಸ್ವಾರ್ಥಕ್ಕೆ ಕೆಲಸ ಮಾಡುತ್ತಿದ್ದಾರೆ. ನಿಜವಾಗಿಯೂ ಪ್ರಜಾ ಪ್ರಭುತ್ವ ಬೆಳೆಯ, ಬೇಕಾಗಿದ್ದರೆ, ನೀವು ಮುಂದಕ್ಕೆ ಬರಬೇಕಾದರೆ ನಿಮ್ಮಲ್ಲಿರುವ ಸ್ವಾರ್ಥಿಗಳನ್ನೂ ದೂರ ಮಾಡಬೇಕು. ಅಯೂಬ್‌ಖಾನ್ ಸರ್ಕಾರ ಬಂದರೂ ಚಿಂತೆಯಿಲ್ಲವೆನ್ನುವ ಪರಿಸ್ಥಿತಿಯುಂಟಾಗಿದೆ.

ಅಧ್ಯಕ್ಷರು.—ಅಯೂಬ್‌ಖಾನ್ ಸರ್ಕಾರ ಎಂದು ಹೇಳಿದಿರಿ. ಹಾಗೆ ಹೇಳಿದರೆ ಅದರ ಅರ್ಥ ಬೇರೆಯಾಗುತ್ತದೆ. ಪಾಕಿಸ್ತಾನದವರು ಹಿಂದೂಸ್ತಾನದ ಮೇಲೆ ಧಾಳಿಮಾಡಿ ಬರಬೇಕು ಎನ್ನುವ ಅರ್ಥ ಬರುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಧಾಳಿ ಮಾಡುವ ಪ್ರಶ್ನೆ ಬರುವುದಿಲ್ಲ. ಅಧಿಕಾರವರ್ಗದ ವರ್ತನೆ ವಿಪರೀತವಾಗಿರುವುದರಿಂದ ಅಂಥ ಸರ್ಕಾರ ಬಂದರೂ ಒಳ್ಳೆಯದು ಎಂದು ಹೇಳಿದೆ. ಈಗಿರುವ ಸರ್ಕಾರ ಹೋಗಿ ರಾಜ್ಯಪಾಲರ ಆಡಳಿತ ಬಂದರೆ ಅವಾಗ ತಮಗೆ ವೇದ್ಯವಾಗುತ್ತದೆ.

ಶ್ರೀಮಾನ್. ಚನ್ನಬಸಪ್ಪನವರು ಹೇಮಾವತಿ ಪ್ರಾಜೆಕ್ಟನ್ನು ಕಟ್ಟಲಾಗುತ್ತದೆಯೆಂದು ಹೇಳಿದ್ದಾರೆ ಆದರೂ ಕೂಡ ಈ ವಿಷಯದಲ್ಲಿ ಕೆಲವರು ಹೇಮಾವತಿ ಪ್ರಾಜೇಕ್ಟನ್ನು ಕಟ್ಟಬಾರದೆಂದು ಪ್ಲಾನಿಂಗ್ ಕಮಿಷನರ್ ಹತ್ತಿರ ಹೋಗಿ ಹೇಳತಕ್ಕ ಅವಕಾಶವಿದೆ. ಇದಕ್ಕೆ ಸಂಬಂಧಪಟ್ಟ ಖಾತೆ ಶ್ರೀಮಾನ್ ಚನ್ನಬಸಪ್ಪನವರಿಂದ ವರ್ಗಾವಣೆಯಾಗಿ ಶ್ರೀಮಾನ್ ವೀರಣ್ಣಗೌಡರಿಗೆ ಬದಲಾವಣೆಯಾಗಿದೆ. ಗೊರೂರು ಬಳಿ ಹೆಮಾವತಿನದಿಗೆ ಅಣೆಕಟ್ಟನ್ನೂ ಹಾಕುವ ಕೆಲಸ ಜಾಗ್ರತೆಯಾಗುವಂತೆ ಪ್ರಯತ್ನಮಾಡಬೇಕು. ಈಗ ಅದರ ಎತ್ತರ ಎಷ್ಟು ಇರಬೇಕೆಂದು ಅಂದಾಜು ಮಾಡಲಾಗಿದೆಯೋ ಅದಕ್ಕಿಂತ ಕಡಮೆಮಾಡಬಾರದು. ಹಿಂದಿನ ಮಂತ್ರಿಳಿಗೂ ಮತ್ತು ಈಗಿನ ಮಂತ್ರಿಗಳಿಗೂ joint responsibility ಇದೆ. ಒರಿಜಿನಲ್ ಎಸ್ಟಿಮೇಟ್ ಏನಿದೆಯೋ ಅದರ ಪ್ರಕಾರ ಹೇಮಾವತಿ ನದಿ ಅಣೆಕಟ್ಟು ಕೆಲಸ ನಡೆಯುವಂತೆ ಮಾಡಬೇಕೆಂದು ಹೇಳಿ ನನ್ನಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಜಂಟೀಅಧಿವೇಶನವನ್ನು ಕುರಿತು ಭಾಷಣ ಮಾಡಿದುದಕ್ಕಾಗಿ ಶ್ರೀಮಾನ್ ನರಸಿಂಹರೆಡ್ಡಿಯವರು ಸೂಚಿಸಿರತಕ್ಕ ವಂದನಾನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಆಡ ಬಯಸುತ್ತೇನೆ.

ನಾವೀಗ ಪ್ರಜಾ ಪ್ರಭುತ್ವದ ಒಂದು ಸಮಾಜರಚನೆ ಮಾಡತಕ್ಕ ಮತ್ತು ಜವಬ್ದಾರಿಯನ್ನು ಹೊತ್ತಿರತಕ್ಕ, ಸರಕಾರವನ್ನು ರಚನೆ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಸಮಾನವಾದ ಸಮಾಜವನ್ನು ರಚನೆ ಮಾಡುವಾಗ ದೇಶದಲ್ಲಿರತಕ್ಕ ಜನಗಳ ಒಂದು ಸಮ್ಮತಿಯನ್ನು ಕೊಡತಕ್ಕದ್ದು ಅತಿ ಮುಖ್ಯವಾದ ಜವಾಬುದಾರಿಯಾಗಿದೆ. ಈ ಸಂಧರ್ಭದಲ್ಲಿ ವರ್ಷದ ಪ್ರಾರಂಭದಲ್ಲಿ ರಾಜ್ಯಪಾಲರು ಮಾತನಾಡಬೇಕಾದರೆ, ಸಾಧಾರಣವಾಗಿ ರಾಜ್ಯದಲ್ಲಿ ಇದುವರೆಗೆ ಆಗಿರತಕ್ಕ ಎಲ್ಲ ವಿಷಯಗಳನ್ನೂ ಪರಿಶೀಲಿಸಿ ಮುಂದಿನ ವರ್ಷಕ್ಕೆ ಆಗಬೇಕಾದ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮತ್ತು ಮಾಡಬೇಕಾದ ಕೆಲವು ಸುಧಾರಣೆಗಳನ್ನು ಸೂಚಿಸತಕ್ಕ ರೀತಿಯಲ್ಲಿ ಪ್ರಸ್ತಾವನೆ ಮಾಡತಕ್ಕದು ಸ್ವಾಭಾವಿಕ. ಹೀಗೆ ಅಂತ ಪ್ರಸ್ತಾಪನೆಯನ್ನು ಕುರಿತು ಭಾಷಣ ಮಾಡತಕ್ಕ ಸಂಧರ್ಭದಲ್ಲಿ ಅವರು ನಮ್ಮ ದೇಶದ ಅನೇಕ ವಿಷಯಗಳನ್ನು ಪ್ರಸ್ತಾಪಿಸಬೇಕಾಗಿತ್ತು. ಮತ್ತು ಹಾಗೆ ಪ್ರಸ್ತಾಪಿಸುವುದರಿಂದ ನಾವು ಕಾರ್ಯಸಾಧನೆ ಮಾಡುವುದಾದರೆ, ನಿಜವಾಗಿಯೂ ನಾವು ಸಮಾನವಾದ ಸಮಾಜರಚನೆ ಮಾಡತಕ್ಕ ಮಾರ್ಗದಲ್ಲಿದ್ದೇವೆಂದು ನಾವು ಹೇಳಬಹುದಾಗಿದೆ. ಹೀಗೆ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಅವರು ಸೂಚಿಸಬೇಕಾಗಿತ್ತು. ಆ ಬಗ್ಗೆ ನಾನಿಲ್ಲಿ ಒಂದೆರಡು ವಿಷಯಗಳನ್ನು ಸೂಚನೆ ಮಾಡಬೇಕೆಂದಿದ್ದೇನೆ. ಮುಖ್ಯವಾಗಿ ಸಮಾನವಾದ ಸಮಾಜರಚನೆಯಾಗಬೇಕಾದರೆ ಪ್ರತಿಯೊಬ್ಬ ಮಾನವನಿಗೂ ಬೇಕಾಗಿರತಕ್ಕ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಇವು ಮೂರು ಮೊಟ್ಟಮೊದಲನೆಯದಾಗಿ ಜನಗಳಿಗೆ ದೊರೆಯಬೇಕಾಗಿದೆ. ಆರ್ಥಿಕವನ್ನು ತಾವಾಗಿಯೇ ಸ್ಥಾಪನೆ ಮಾಡಿಕೊಳ್ಳುವುದಾದರೂ ಕೂಡ ಇದಕ್ಕೆ ತಳಹದಿಯಾಗಿ, ಸಾಮಾಜಿಕ ಮತ್ತು ರಾಜಕೀಯವನ್ನು ಗಳಿಸಿಕೊಡತಕ್ಕ ಈ ರಾಜಕೀಯದಲ್ಲಿ ಅನೇಕ ತೊಡಕುಗಳಿರತಕ್ಕದ್ದನ್ನು ನಾವು ಪರಿಹಾರಮಾಡತಕ್ಕ ಮಾರ್ಗವನ್ನು ಅವಲಂಬಿಸಬೇಕಾದದ್ದು ಅತ್ಯಗತ್ಯ. ಮೊಟ್ಟ ಮೊದಲನೆಯದಾಗಿ ನಮ್ಮ ದೇಶ ಪರದೇಶವನ್ನು ಅವಲಂಬಿಸಿದೆ, ನಾವು ಸ್ವಾವಲಂಬಿಯಾಗಿರಬೇಕಾದರೆ ಮೊಟ್ಟಮೊದಲನೆಯದಾಗಿ ನಮಗೆ ಬೇಕಾಗಿರುವುದು ಹೊಟ್ಟೆಗೆ, ಹೊಟ್ಟೆಗೆ ಬೇಕಾದ ವಸ್ತುವನ್ನು ಸೃಷ್ಟಿಮಾಡತಕ್ಕ ಜನಗಳು ಏನು ಇದ್ದಾರೋ ಅವರ ಸುಧಾರಣೆ ಬಹಳ ಪ್ರಾಮುಖ್ಯವಾದುದು. ಅವರ ಸುಧಾರಣೆಗಳಿಗೆ ನಾವು ಎಷ್ಟರಮಟ್ಟಿಗೆ ಗಮನಕೊಡಬೇಕು ಎನ್ನುವುದನ್ನು ನಾವು ಮೊಟ್ಟಮೊದಲನೆಯದಾಗಿ ಪರಿಶೀಲಿಸಬೇಕು. ಮತ್ತು ಈ ವಿಷಯದಲ್ಲಿ ರಾಜ್ಯಪಾಲರು ಸೂಚನೆಯನ್ನು ಇಲ್ಲಿ ಕೊಡಲಿಲ್ಲವೆಂದು ನಾನು ಸ್ವಲ್ಪ ಅಸಮಾಧಾನಪಡುತ್ತೇನೆ. ದೇಶ ಸುರಕ್ಷಿತವಾಗಿ, ತಾನು ಸ್ವಾವಲಂಬಿಯಾಗಬೇಕಾದರೆ, ಆಹಾರವನ್ನು ಸೃಷ್ಟಿ ಮಾಡುವುದು ಬಹಳ ಪ್ರಾಮುಖ್ಯವಾದುದು. ಈ ರೀತಿ ಪ್ರಾಮುಖ್ಯವಾದ ಉಳುಮೆ ಮಾಡತಕ್ಕ ಜನಗಳ ವಿಚಾರದಲ್ಲಿ ನಾವು ಹೆಚ್ಚಿಗೆ ನಿಗಾ ತರತಕ್ಕದ್ದು ಬಹಳ ಪ್ರಾಮುಖ್ಯವಾದುದು. ಏಕೆಂದರೆ, ಈಗ ನಮಗೆ ತಿಳಿದಂತೆ ಭೂಸುಧಾರಣೆ ತಲೆ ಎತ್ತಿದೆ. ಭೂಸುಧಾರಣೆಯ ಮಸೂದೆ ಸಾಧಾರಣವಾಗಿ ಮೂರು-ನಾಲ್ಕು ವರ್ಷಗಳಿಂದಲೂ ಬರುತ್ತೆ ಎಂದು ನಾವು ಕೇಳುತ್ತಿದ್ದೇವೆ. ಆದರೆ ರೂಪಿತಕ್ಕೆ ಇನ್ನೂ ಬಂದಿಲ್ಲ. ಅದಕ್ಕಾಗಿ ಜನಗಳು ಬಹಳ ಆತುರದಿಂದ ಇದ್ದಾರೆಂದು ಹೇಳ ಬಯಸುತ್ತೇನೆ. ನಾನು ಒಬ್ಬ ರೈತನಾಗಿದ್ದೇನೆ. ರೈತ ಕಷ್ಟಪಟ್ಟು ಕೆಲಸಮಾಡುತ್ತಾನೆ. ಅಂತಹ ವ್ಯವಸಾಯಗಾರನಿಗೆ ಇರುವ ತೊಡಕನ್ನು ಪರಿಹಾರ ಮಾಡಬೇಕಾದುದು ಅತಿ ಮುಖ್ಯವಾದದು. ಈ ವಿಚಾರದಲ್ಲಿ ಹೆಚ್ಚಿಗೆ ಶ್ರದ್ಧೆವಹಿಸಬೇಕಾಗಿತ್ತು ಮತ್ತು ಇನ್ನೂ ಹೆಚ್ಚು ವಿಷಯಗಳನ್ನು, ಹೇಳಬೇಕಾಗಿತ್ತು ಎಂದು ನಾನು ಇಷ್ಟುಮಾತ್ರ ಹೇಳುತ್ತೇನೆ.

ಹೀಗೆ ನಮ್ಮ ದೇಶದಲ್ಲಿ ನಾವು ಏನು ಒಂದು ರಾಜಕೀಯದಲ್ಲಿ ಒಂದು ವರ್ಗಭೇದ ರೀತಿಯಿಂದ ಹಿಂದುಮುಂದಾಗಿದೆ ಎನ್ನುವ ರೀತಿಯಲ್ಲಿ ಈ ಹಿಂದೆಯೇ ಒಂದು ಮಸೂದೆಯನ್ನು ಮಾಡಿ ಬಹುಶಃ Forward ಮತ್ತು Backward ಎಂದು ನಮ್ಮ ದೇಶದಲ್ಲಿ ಮಾಡುತ್ತಿದ್ದಾರೆ ಇವರು ಬಹುತೇಕ ಬಹಳ ಹಿಂದೆ ಉಳಿದಿರುವುದರಿಂದ ಇವರನ್ನು ಮುಂದೆ ತರುವುದೇ ದೇಶದಲ್ಲಿರತಕ್ಕ ಸಾಧನೆ. ಆ ಸಾಧನೆಯ ಉಪಯೋಗದಿಂದ ಇನ್ನೂ ಅನೇಕ ವರ್ಗದ ಜನರು ಹಿಂದೆ ಉಳಿಯುವುದಕ್ಕೆ ಅವಕಾಶ ದೊರತಿದೆ. ಇದನ್ನು ಪರಿಹಾರ ಮಾಡುವ ಯೋಜನೆ ಮಾಡುವುದು ಅತ್ಯಗತ್ಯ. ಈಗಾಗಲೇ ಈ ಬಗೆಗೆ ಒಂದು ಸಮಿತಿ ಮಾಡಿದ್ದಾರೆಂದು ಕೇಳುತ್ತೇನೆ. ಈ ಸಮಿತಿ ಎಷ್ಟರ ಮಟ್ಟಿಗೆ ಹಿಂದುಳಿದಿರತಕ್ಕ ವರ್ಗಕ್ಕೆ ಪ್ರಯೋಜನ ದೊರಕಿಸಿಕೊಡುವುದೋ ಅದನ್ನು ನಾವು ನಿರೀಕ್ಷಿಸಬೇಕಾಗಿದೆ. ಈ ಮಧ್ಯದಲ್ಲಿ ಅನೇಕ

ಹಿಂದುಳಿದ ಕೋಮುಗಳೊಳಗೆ ಆಗಿರತಕ್ಕ ಅನ್ಯಾಯವನ್ನು ಸರಿಮಾಡುವುದಕ್ಕೆ ಈ ಸಮಿತಿಯ ವರದಿಯಲ್ಲಿ ಬರುವಂತೆ ಅಡಕವಾಗಿದೆ ಎಂದು ಕೇಳುತ್ತೇನೆ. ಈ ಸಂದರ್ಭದಲ್ಲಿ ಹಿಂದುಳಿದ ಈ ಜನಾಂಗದ ಕೋಮಿನ ದೃಷ್ಟಿಯಿಂದ ನಮ್ಮ ದೇಶದಲ್ಲಿ ಈ ರೀತಿ ಹಿಂದುಳಿದಿರತಕ್ಕ ನೀತಿ ಹೇಗಿರಬೇಕು ಎನ್ನುವುದರ ಬಗೆಗೆ ರಾಜ್ಯಪಾಲರು ಹೇಳಬೇಕಾಗಿತ್ತು. ಏಕೆಂದರೆ ಜನಗಳ ಒಂದು ಅರ್ಥಿಕ-ಸುಧಾರಣೆಯಾಗಬೇಕಾದರೆ, ಮೊಟ್ಟಮೊದಲನೆಯದಾಗಿ ಸಾಮಾಜಿಕ ಮತ್ತು ರಾಜಕೀಯದಲ್ಲಿ ಇವರಿಗೆ ಸರಿಯಾದ ಸ್ಥಾನ-ಮಾನ ದೊರೆಯಬೇಕು, ಮತ್ತು ಕೆಲಸ ಮಾಡಲು ತಕ್ಕ ಸಾಮರ್ಥ್ಯ ದೊರೆಯಬೇಕು. ಅವರನ್ನು ಕುರಿತು ಮಾತನಾಡಲಿಲ್ಲ ಎಂದು ನಾನು ಸ್ವಲ್ಪ ಅಸಮಾಧಾನಪಡುತ್ತೇನೆ.

ಹಾಗೇ, ಇತ್ತೀಚೆಗೆ ರಚನೆಯಾಗಿರತಕ್ಕ ಗ್ರಾಮರಾಜ್ಯದ ವಿಚಾರದಲ್ಲಿ ಹೇಳಬೇಕಾಗಿದೆ. ಗ್ರಾಮರಾಜ್ಯ ಎನ್ನುವುದು ಹಿಂದೆ ರಾಮರಾಜ್ಯವಾಗಬೇಕೆಂದು ಹೇಳುವಂತೆ ಆ ರೀತಿ ಗ್ರಾಮಪಂಚಾಯಿತಿಗಳ ಬಗ್ಗೆ ಬಹು ಚೆನ್ನಾಗಿ ಹೇಳಿದ್ದಾರೆ. ಬಹುಶಃ ಮುಂದೆ ಹೆಚ್ಚು ಅರ್ಥಿಕ ನೆರವನ್ನು ಕೊಟ್ಟು ದೇಶದ ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ ಈ ಪಂಚಾಯಿತಿಗಳೇ ವಹಿಸಿಕೊಂಡು ಅವರು ಮುಂದೆ ದೇಶದ ಅಭಿವೃದ್ಧಿಯನ್ನು ಸಾಧಿಸತಕ್ಕದ್ದು ಎಂದು ಹೇಳಿದ್ದಾರೆ. ಈ ಬಗ್ಗೆ ಸ್ವಲ್ಪ ಮಟ್ಟಿಗೆ ಹೇಳುವುದಾದರೆ, ಈ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ಅವಶ್ಯಕವಾಗಿ ಬೇಕಾಗಿತ್ತು. ಬಹುಶಃ ಅನೇಕ ತೊಡಕುಗಳನ್ನು ನಿವಾರಣೆ ಮಾಡುವ ಜವಾಬ್ದಾರಿ ಇವರಿಗಿರಬೇಕಿತ್ತು. ಮತ್ತು ಸಾಕಷ್ಟು ಅರ್ಥಿಕ ನೆರವು ದೊರೆಯಬೇಕಿತ್ತು. ಆ ರೀತಿಯಾದ ಅರ್ಥಿಕ ನೆರವು ಮತ್ತು ನೈತಿಕ ಬೆಂಬಲ ದೊರಕಿಲ್ಲ. ಆ ರೀತಿ ಕೊಟ್ಟರೆ ಗ್ರಾಮದ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಗ್ರಾಮರಾಜ್ಯ ಅಥವಾ ರಾಮರಾಜ್ಯ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಹೀಗೆ ನಮ್ಮ ದೇಶದ ಹಿತವನ್ನು ಅಭಿವೃದ್ಧಿಯನ್ನು ಸಾಧಿಸತಕ್ಕ ಸಂದರ್ಭದಲ್ಲಿ, ಒಂದು ಒಳ್ಳೆಯ ಯಶಸ್ವಿಯಾದ ಕಾರ್ಯವನ್ನು ಮಾಡುವುದರಲ್ಲಿ ಒಂದು ವರ್ಗಕ್ಕೆ ಅಭಿವೃದ್ಧಿಯಾದರೆ ಇನ್ನೊಂದು ವರ್ಗಕ್ಕೆ ತೊಡಕಿನದಾಗಿ ಆಗತಕ್ಕದ್ದು ಸ್ವಾಭಾವಿಕ. ಈ ರೀತಿ ಅಭಿವೃದ್ಧಿ ಕೆಲಸಗಳನ್ನು ದೇಶದಲ್ಲಿ ಮಾಡಿ ರಚನೆ ಮಾಡುವ ಸಂದರ್ಭದಲ್ಲಿ ಎಲ್ಲ ಜನಕ್ಕೂ ನ್ಯಾಯವನ್ನು ದೊರಕಿಸಿಕೊಡಲು ಸಾವಧಾನದಿಂದ ಪರಿಶೀಲಿಸಿ ಅವರಿಗೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿಕೊಡಬೇಕಾದ್ದು ಸರಕಾರದ ಕರ್ತವ್ಯ. ಹಾಗೆಯೇ ಒಂದು ಉದಾಹರಣೆ ಹೇಳುವುದಾದರೆ ಈ ಶರಾವತಿ ಯೋಜನೆಯಲ್ಲಿ ದೇಶದ ಅಭಿವೃದ್ಧಿಗಾಗಿ ಒಂದು ದೊಡ್ಡ ಪ್ರಮಾಣದ ಅಣೆಕಟ್ಟನ್ನು ಕಟ್ಟುವ ಸಂದರ್ಭದಲ್ಲಿ ಸುಮಾರು 30 ಸಾವಿರ ಜನಸಂಖ್ಯೆ ಇರತಕ್ಕ ಪ್ರದೇಶದಲ್ಲಿ ಸುಮಾರು 1 ಕೋಟಿ ರೂಪಾಯಿಗಳು ದೇಶಕ್ಕೆ ಉತ್ಪನ್ನ ಬರುತ್ತಿದ್ದಂತಹ ಪ್ರದೇಶವನ್ನು ಮುಳುಗಡೆಯಾಗುವಂತೆ ಮಾಡಿದರು. ಈ ರೀತಿ ಪ್ರತೀ ವರ್ಷದ ಉತ್ಪನ್ನ ನಮಗೆ ನಷ್ಟವಾದ ಉತ್ಪನ್ನ. ಆ ನಷ್ಟವನ್ನು ಭರ್ತಿಮಾಡುವುದಕ್ಕೆ ನಾವು ಎಷ್ಟು ಪ್ರಯತ್ನಪಡಬೇಕು? ಜನಗಳಿಗೆ ಅಷ್ಟು ಉದ್ಯಮವನ್ನು ಎಲ್ಲಿಂದ ಕೊಡಬೇಕು? ಅವರು ಯಾವ ರೀತಿ ಉತ್ಪಾದನೆ ಪಡೆಯಬೇಕು? ಅವರು ದೇಶಕ್ಕಾಗಿ ತ್ಯಾಗಮನೋಭಾವನೆಯನ್ನು ಹೊಂದಿದ್ದಾರೆ, ಆದ್ದರಿಂದ ಅವರ ಮನಸ್ಸು ಸಂತುಷ್ಟಿಯಾಗುವ ರೀತಿಯಲ್ಲಿ ನಾವು ಅವರನ್ನು ನೋಡಿಕೊಳ್ಳಬೇಕು ಎನ್ನುವ ಜವಾಬ್ದಾರಿ ಮುಖ್ಯವಾಗಿ ಸರ್ಕಾರದ್ದು. ನಿಜವಾಗಿ ಜನಗಳ ಮನಸ್ಸನ್ನು ನೋಯಿಸದಹಾಗೆ ಇಡುವುದು ಸರ್ಕಾರದ ಜವಾಬ್ದಾರಿ. ಈಗಾಗಲೇ ಜನಗಳಿಗೆ ಸಾಕಷ್ಟು, ಅವರು ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಅನುಕೂಲತೆಗಳನ್ನು ಒದಗಿಸಿಲ್ಲ. ಏನೇ ಆಗಲಿ, ಇನ್ನುಮುಂದಾದರೂ ಅವರ ಮನಸ್ಸಿಗೆ ನೋವಾಗದ ರೀತಿಯಲ್ಲಿ ಅವರ ಜವಾಬ್ದಾರಿಯನ್ನು ಸರ್ಕಾರದವರು ನೋಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ.

(ಶ್ರೀ ಜೆ. ಮುಕ್ಕಣ್ಣಪ್ಪ)

ದೇಶದಲ್ಲಿ ಇನ್ನೂ ಕ್ಲಿಷ್ಟಪರಿಸ್ಥಿತಿಯಲ್ಲಿರುವುದು ಎಂದರೆ ಈ ಪಾನನಿರೋಧದ ವಿಷಯ. ಈ ಪಾನನಿರೋಧವನ್ನು ನಮ್ಮ ದೇಶದಲ್ಲಿ ಜಾರಿಗೆ ತಂದದ್ದರಿಂದ ಅದರಲ್ಲಿಯೂ ಅನೇಕ ಜನಗಳು ನಿರಾಶ್ರಿತರಾಗಿ ಎಷ್ಟೋ ಕಷ್ಟಕ್ಕೆ ಒಳಗಾಗಿದ್ದಂತವರನ್ನು ನಾವು ಈ ದಿವಸ ನೋಡುತ್ತಿದ್ದೇವೆ. ಏಕೆಂದರೆ ದೇಶದ ಜನಗಳು ದೇಶದ ಹಿತಕ್ಕಾಗಿ ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ಲಕ್ಷಾಂತರ ಜನಗಳು ಈ ಉದ್ಯಮವನ್ನು ಅವಲಂಬಿಸಿಕೊಂಡಿದ್ದರೂ ಈಗ ಈ ಪಾನನಿರೋಧ ಶಾಸನದಿಂದ ಅವರು ನಿರಾಶ್ರಿತರಾಗಿರುವ ಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಈ ರೀತಿಯಾಗಿರತಕ್ಕ ಅನ್ಯಾಯ ತೊಡೆದುಹಾಕುವುದು ಮತ್ತು ಅವರಿಗೆ ಸಾಕಷ್ಟು ಪರಿಹಾರವನ್ನು ಒದಗಿಸುವುದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಅವರ ತ್ಯಾಗಮನೋಭಾವನೆಗೆ ಸರಿಯಾದ ಅನುಕೂಲತೆಗಳನ್ನು ಸರ್ಕಾರದವರು ಅವರಿಗೆ ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಇನ್ನೊಂದು ವಿಷಯ. ನಾನು ಮಲೆನಾಡು ಪ್ರದೇಶದವನು. ಆದ್ದರಿಂದ ನಮ್ಮ ಮಲೆನಾಡಿನಲ್ಲಿರತಕ್ಕ ಕಷ್ಟಸುಖಗಳು ಏನು ಎಂಬುದನ್ನು ಈ ಸಂಧರ್ಭದಲ್ಲಿ ಹೇಳುತ್ತೇನೆ. ಅಲ್ಲಿ ಒಂದೊಂದು ಗುಡ್ಡ ಮತ್ತು ಹಳ್ಳಪ್ರದೇಶಗಳು ಒಂದೊಂದು ಊರಿಗೆ ಕೇವಲ ಒಂದೆರಡು ಮನೆಗಳಿವೆ. ಬಹುಶಃ ಅಲ್ಲಿ ವಾಸಿಸುವುದಕ್ಕೆ ಬಹಳ ಕಷ್ಟಕರವಾದ ಪ್ರದೇಶವೆಂದು ನಾನು ಇಲ್ಲಿ ಹೇಳುತ್ತೇನೆ. ಅಲ್ಲಿ ಕಡಮೆ ಕಾಡುಪ್ರದೇಶವಿದ್ದರೂ ಹೆಚ್ಚಿಗೆ ಉತ್ಪಾದನೆ ಮಾಡತಕ್ಕ ಪ್ರದೇಶವಾಗಿದೆ. ಅದು ಹೆಚ್ಚಿಗೆ ಅಡಿಕೆ ಬೆಳೆಯನ್ನು ಬೆಳೆಯುವ ಪ್ರದೇಶ. ಇಂತಹ ಪ್ರದೇಶದಲ್ಲಿ ಅಡಿಕೆ ಬೆಳೆ ಹೆಚ್ಚಾಗಿ ಬೆಳೆದರೂ ಈಗಾಗಲೇ ಆ ಬೆಳೆಗೆ ರೋಗರುಜಿನಗಳು ತುಂಬಿ ಜನಗಳು ಅದರಲ್ಲೂ ಆ ಬೆಳೆ ಬೆಳೆಯುತಕ್ಕ ವ್ಯವಸಾಯಗಾರರು ಅನೇಕ ಕಷ್ಟಗಳಿಗೆ ಸಿಕ್ಕಿ ವಿಪರೀತ ನಷ್ಟಕ್ಕೆ ಗುರಿಯಾಗಿದ್ದಾರೆ. ಇದಕ್ಕಾಗಿ ಬಹು ಕಾಲದಿಂದಲೂ ವ್ಯವಸಾಯ ಸಂಶೋಧನಾ ಸಂಸ್ಥೆಯನ್ನು ಮಲೆನಾಡಿನಲ್ಲಿ ರಚಿಸಬೇಕು ಎಂದು ಹೇಳುತ್ತಲೇ ಇದ್ದಾರೆ. ಆ ಮೂಲಕ ಈ ಬೆಳೆಗೆ ಬರತಕ್ಕ ರೋಗರುಜಿನಗಳನ್ನು ಕೂಡಲೇ ತಡೆಗಟ್ಟಿ ಇನ್ನೂ ಹೆಚ್ಚಿಗೆ ಈ ಉದ್ಯಮವನ್ನು ಬೆಳೆಸಿ ಹೆಚ್ಚಿನ ಪ್ರಮಾಣದಲ್ಲಿ ಅಡಿಕೆಯನ್ನು ತಯಾರುಮಾಡಲು ಅವಕಾಶವನ್ನು ಇವರು ಕಲ್ಪಿಸಿಕೊಡಬೇಕು. ಅದಕ್ಕಾಗಿಯೇ ಮಲೆನಾಡುಪ್ರದೇಶಗಳಿಂದ ಬರತಕ್ಕ ಮನವಿಗಳನ್ನೆಲ್ಲಾ ಸರ್ಕಾರದವರು ಪರಿಶೀಲಿಸಿ ಅವರಿಗೆ ತಕ್ಕ ಸಾಕರ್ಯಗಳನ್ನೊದಗಿಸಿಕೊಡಬೇಕು. ಆದ್ದರಿಂದ ಕೂಡಲೇ ಮಲೆನಾಡು ಪ್ರಾಂತದಲ್ಲಿ ಒಂದು ಅಗ್ರಿಕಲ್ಚರಲ್ ರಿಸರ್ಚ್ ಫಾರಂ ತೆಗೆದು ಆ ಮೂಲಕ ಅಡಿಕೆ ಬೆಳೆಯನ್ನು ಚೆನ್ನಾಗಿ ಪರಿಶೋಧನೆಮಾಡಿ ಅದನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪನ್ನ ಮಾಡಲು ಅಡಿಕೆ ವ್ಯವಸಾಯಗಾರರಿಗೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೊಂದು ವಿಷಯ. ಈಗಾಗಲೇ ನಮ್ಮ ದೇಶದಲ್ಲಿ ಸರ್ಕಾರದವರು ಪ್ರತಿಯೊಬ್ಬರನ್ನೂ ವಿದ್ಯಾವಂತರನ್ನಾಗಿ ಮಾಡಬೇಕು ಎಂಬುದಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದನ್ನು ಸ್ವಲ್ಪಮಟ್ಟಿಗೆ ವಿಮರ್ಶೆ ಮಾಡಬೇಕು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತರಬೇಕೆಂದು ಯೋಚನೆ ಮಾಡಿದ್ದಾರೆ. ಇದನ್ನು ಸರ್ಕಾರದವರು ಮುಂದಾಗಿ ಯೋಚನೆ ಮಾಡುವುದು ಅಗತ್ಯವೆಂದು ನನ್ನ ಅಭಿಪ್ರಾಯ. ಇದು ಬಹುಶಃ ಹಿಂದುಳಿದ ಅದರಲ್ಲೂ ಅಲ್ಪ ತಿಳುವಳಿಕೆಯಸ್ಥರ ಮೇಲೆ ರಾಮಬಾಣವಾಗಬಹುದು. ಆ ರೀತಿ ಯಾರಿಗೂ ಕಡ್ಡಾಯ ಶಿಕ್ಷಣವನ್ನು ಕೊಡಬಾರದು. ಕಾನೂನು ರೂಪದಿಂದ (ಪ್ರಚಾರ ರೂಪದಿಂದಲ್ಲದೆ) ವಿದ್ಯಾಭ್ಯಾಸವನ್ನು ಜನರಿಗೆ ಅಳವಡಿಸುವುದು ಸೂಕ್ತ ಮಾರ್ಗವಲ್ಲ. ಕೇವಲ ಕಾನೂನುಗಳಿಂದ ಇದನ್ನು

ಜಾರಿ ಮಾಡಿದರೆ ಬಹು ಜನರು, ಅವಿದ್ಯಾವಂತರಾದವರು, ತಿಳುವಳಿಕೆಯಿಲ್ಲದವರು ಅನೇಕ ಕಾನೂನುಗಳಿಗೆ ಸಿಕ್ಕಿ ನರಳಬಹುದು ಎಂದು ನಾನು ಹೇಳುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ದಂಡನೆ ಕ್ರಮಕ್ಕೆ ಹೆಚ್ಚಿಗೆ ಮಹತ್ವ ನೀಡದೆ ಬದಲಾವಣೆ ರೀತಿಯಿಂದ ಪ್ರಚಾರದ ಮೂಲಕ ಜನರ ಮನಸ್ಸನ್ನು ಒಲಿಸಿಕೊಳ್ಳುವ ಹಾಗೆ ಕಾನೂನುಗಳನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲು ಅಪೇಕ್ಷೆಪಡುತ್ತೇನೆ.

ಇನ್ನು ನಮಗೆ ಅತಿ ಮುಖ್ಯವಾದ ಒಂದು ವಿಷಯವಿದೆ. ಈಗ ದೇಶದ ಆಡಳಿತದಲ್ಲಿರತಕ್ಕ ಕೆಲವು ಕುಂದುಕೊರತೆಗಳನ್ನು ಈ ಸಂದರ್ಭದಲ್ಲಿ ಪರಿಶೀಲನೆ ಮಾಡಬೇಕು. ಏಕೆಂದರೆ ನಮ್ಮ ದೇಶದಲ್ಲಿ ಈಗ ಪ್ರಜಾಸರ್ಕಾರ ಎಂದು ರಚನೆ ಮಾಡಿದ್ದೇವೆ. ಪ್ರಜೆಗಳಿಗೂ ಮತ್ತು ಸರ್ಕಾರಕ್ಕೂ ಒಂದು ನೇರವಾದ ಸಂಪರ್ಕವಿರತಕ್ಕ ಈ ಸರ್ಕಾರ ಈ ಸಂದರ್ಭದಲ್ಲಿ ಪ್ರಜೆಗಳ ಅಭೀಪ್ಸ್ಯವನ್ನು ನೆರವೇರಿಸತಕ್ಕ ಕಾಗದಪತ್ರಗಳನ್ನು ಯಾವ ರೀತಿ ಪರಿಶೀಲನೆ ಮಾಡುತ್ತಿದೆ? ಎಷ್ಟು ಚೆನ್ನಾಗಿ ವಿಲೇವಾರಿ ಮಾಡುತ್ತಿದೆ ಎಂಬುದನ್ನು ನೋಡುವುದು ಮುಖ್ಯ ಕರ್ತವ್ಯ. ಹಾಗೆ ಒಂದುವೇಳೆ ಸರಿಯಾಗಿ ನೋಡದೇಹೋದರೆ ದೇಶದ ಜನಗಳು ಸರ್ಕಾರದ ವಿಷಯದಲ್ಲಿ ಅಸಹ್ಯಪಡುವುದು ಇದೇ ಸಂದರ್ಭದಲ್ಲಿಯೇ ಎಂದು ನಾನು ಹೇಳಬೇಕಾಗಿದೆ. ಸರ್ಕಾರ ಈ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡದೆ ಜನರ ಬೇಡಿಕೆಗಳನ್ನು ನಿವಾರಣೆಮಾಡದೆ ಹೋದರೆ ಸರ್ಕಾರ ಜನಗಳ ವಿಕೋಪಕ್ಕೆ ಪಾತ್ರವಾಗುವುದು ಅನಿವಾರ್ಯ. ಆದ್ದರಿಂದ ಈಗಿನ ಸನ್ನಿವೇಶದಲ್ಲಿ ಸಾಮಾನ್ಯ ಜನಗಳಿಗೆ ಆಗತಕ್ಕ ಕಿರುಕುಳ, ತೊಡಕುಗಳು, ಬೇಕಾದಷ್ಟಿವೆ ಎಂಬುದನ್ನು ನಾನೇನೂ ಒತ್ತಿ ಸರ್ಕಾರಕ್ಕೆ ಹೇಳಬೇಕಾಗಿಲ್ಲ. ಆದ್ದರಿಂದ ಸಾಕಾದಮಟ್ಟಿಗೆ ಮತ್ತು ಸಾಧ್ಯವಾದಮಟ್ಟಿಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಇನ್ನುಮುಂದೆ ಒಬ್ಬ ಸೂಪರ್‌ವೈಜರ್ ಎಂದು ನೇಮಕಮಾಡಿ ಅವರ ಮೂಲಕವೇ ಆಯಾ ತಾಲೂಕಿಗೆ ಸಂಬಂಧಪಟ್ಟ ಗ್ರಾಮಗಳ ಎಲ್ಲಾ ರಿಕಾರ್ಡುಗಳನ್ನೂ ಜಾಗ್ರತೆಯಾಗಿ ತರಿಸಿಕೊಂಡು ಅಲ್ಲಿಯೇ ವಿಲೇವಾರಿ ಮಾಡತಕ್ಕ ಕ್ರಮವನ್ನು ಸರ್ಕಾರದವರು ಕೂಡಲೇ ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟನ್ನು ಹೇಳುತ್ತಾ, ರಾಜ್ಯಪಾಲರ ಭಾಷಣದ ಮೇಲೆ ಅಭಿನಂದನೆಯನ್ನು ಸೂಚಿಸಿರತಕ್ಕ ನಿರ್ಣಯಕ್ಕೆ ನನ್ನ ಪೂರ್ಣ ಬೆಂಬಲವನ್ನು ಕೊಟ್ಟು, ಇವತ್ತು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri B. R. SUNTHANKAR (Belgaum).—Mr. Speaker, Sir, I have to thank you for giving me this opportunity on the last day of this debate on the Motion of thanks for the Governor's Address. After having closely gone through the Address, I was surprised to find a sort of self-complacency and a sort of self-satisfaction on the part of the Government on their performance in the past years. As a matter of fact, looking to the performance of the Government in the various fields of administration, there is absolutely no ground for self-complacency or self-satisfaction. The Government also seem to be self-satisfied over the execution of the second plan. We are not given a detailed report of the execution of the programmes in the various fields in real terms of achievement of the Second Plan. We are not supplied with such a detailed report and unless such a detailed report is given to us, I am not prepared, I submit, to accept the statement of the Government that they have made substantial progress in the execution of the Second Plan. Sir, I do not understand how the Government can afford to be so self-complacent when there is vast amount of work to be done and when

(Sri B. R. SUNTHANKAR)

there is vast scope for all-round mprovement in the affairs of the Government. This attitude on self-complacency on the part of the Government, I submit, is coming in the way of improvement in the administration and in the affairs of the Government in general. There is a lack of urge in the Government to improve the affairs of the State and unless that urge for development, urge for improvement, urge for all-sided improvement, in the administration of the Government is there, there will be no improvement, there will be no development in the affairs of the State.

Now, I will come to my own issue, the issue of my own people, that is regarding the border problem—the border problem of Marathi-speaking areas in the State.

Sri G. SIVAPPA.—They are also our people.

Sri B. R. SUNTHANKAR.—Of course, we are all one ; but the issue is there. So, the Government has at last broken their silence on this border issue. On the last four occasions for the last four years, in the Governor's Address, the Government have been meticulously silent about this border issue. There was a reference to the border issue in the First Address just after the new State was formed, after the reorganisation of the new State, on the 19th December 1956 and at that time, the Government had assured the people of the State that they would press for the Kannada-speaking border areas in the outlying States ; but that assurance was not kept up, it was not implemented by the Government. The present Address makes reference to only the border issue between Maharashtra and Mysore and is meticulously silent on the Kannada-speaking border areas in other States. There is no reference about Kasargod, Madagasira, Hosur and Talawadi Firka and so many other areas that are outlying in the States of Kerala, Andhra and Madras. So, the Government has utterly neglected these Kannadigas in the outlying States. Now, it is said in the Address that a border committes is appointed. The Committee is appointed and it has two representatives each of Mysore Government and the Government of Maharashtra. The constitution of this Committee is very strange, because the terms of reference to this Committee are vague. There are no definite terms of reference. No principles are laid down on the basis of which this border problem has got to be solved. There is no reference to the principles also. Strangely, I think the Committee has no Chairman. There is no convener for this Commttee. All the transactions are to be carried on by correspondence. The Constitution of this committee is very strange. The Committee is to report to the respective Governments and the findings or the decisions of this Committee are not binding on all the Governments concerned TheHonourable Chief Minister has more than once delcared that the decisions of this Committee are not binding on him or his Government. So, what is going to come out of this Committee? Looking to the constitution of the committee, the work of the committee, the procedure they are

following we have no hopes of arriving at any satisfactory solution of this border problem through this Committee. I must make it clear. There is no genuine desire on the part of the Government to solve this border problem and that is why they are playing all sorts of dilatory tactics. The Committee was appointed in the month of June last year, I think on the 3rd of June if I remember right and the first meeting of that Committee took place after eight months, that is on 23rd January 1961. Then there was a report that this committee was to tour the border areas and there was also the report that the Committee was to meet Belgaum and Karwar border areas on the 23rd February. Now, the month of February is gone. We do not know when the Committee is going to meet border areas. The fact is there. There is pressure from the Congresswalas of the Belgaum District Committee on the Government.

4.30 P.M.

Yes Sir, there are a handful of obstinate Congressmen in the Belgaum District Congress Committe who do not want that this problem should be solved and they put pressure, particularly, on the Chief Minister. As a matter of fact, they did not want this Committe to be constituted. They also did not want the Committee to tour the border area because they are afraid that the Committe would find out the fact that this area should go to Maharastra and it would be proved that these are all Maharastrian areas. They are afraid that the truth would be found out and therefore, they are bringing pressure on the Chief Minister.

Now Sir, this Committee is similar to the Committee appointed regarding the dispute between China and India; it is the pro-type of the China-India Border Dispute.

Mr. SPEAKER.— Are Maharastra and Mysore two Countries? If the Chief Minister of Maharastra comes to know about this, he will vehemently protest against it. In India, States are not countries.

Sri B. R. SUNTHANKAR.—When the Hon'ble President came to Belgaum, we waited on him and we drew his attention to this border problem. He also said that similar committee had been appointed in regard to China and India Border Dispute.

Sri K. F. PATIL.— Sir, I do not know whether the Member is correctly quoting the President. But, whoever says it, it is wrong.

Sri B. R. SUNTHANKAR.— Sir, the terms of reference are the same, the procedure is the same and this Committee has to report to its respective Government and that Committee also has to report to its respective Government. I do not know why the Minister should take objection to my statement.

Sri K. F. PATIL.— I am not objecting; it reveals his mind.

Sri B. R. SUNTHANKAR.—The same thing can be said about the Minister also, Sir.

Sri K. F. PATIL.— People will judge.

Sri B. R. SUNTHANKAR.— Yes, yes; people will certainly judge.

Sri M. C. NARASIMHAN.—Sir, for the last four years, this Minister did not choose to talk, but all of a sudden, he has begun to talk about the people; what is this Sir ?

Sri B. R. SUNTHANKAR.— My contention is, the attitude of the Government is manifesting here. Sir, I may extend the comparison a bit further. China has occupied the Indian territory of 12,000 sq.miles. So, there is territorial aggrandisement on the part of China. We call it Red Imperialism. May I humbly call this as Mysore or Kannadigas Imperialism?

Mr. SPEAKER.—I know, this question is a keen question. Comparison of this kind is not in the interest of the Nation. After all, these are not countries; let us remeber that. You may say that Kannadigas are keeping these areas and it is not correct. He can say the problem is keen.

Sri T. MARIAPPA.— In fact, that is a border question and this is boundry question.

Mr. SPEAKER.— After all, Maharastra is not a nation and Mysore is also not a nation. I understand the mind of the Member perfectly well. But, at the same time, he should not talk in a way which people will think anti-national. If we say Maharastra is nation and Mysore is a nation, it is anti-national. His feelings are perfectly understandable. He can say the problem is keen.

Sri B. R. SUNTHANKAR.—Sir, the problem has assumed such volume that I cannot refrain from comparing this problem with that of China and India problem. I will not dilate further. I will go to the next point.

Sir, by their trying to retain Belgaum, Karwar area in Mysore, they have betrayed the Kannadigas who are in the other States. So, there should be an attitude of give and take. The Government should take whatever that is theirs—where there are Kannada majority—and give away areas which are of the other States. But, the attitude of this Government is, they want to take only and not to give anything which rightfully belongs to others. If this Government adopts the attitude, the policy of give and take, this problem would be solved in no time. Sir, my friend Mr. Gaonkar has came out openly and supported the demand of the Maharastrians because the Hon'ble Member tried to bow to the wishes of the people. The real truth has dawned on him and he has supported the view of the Maharastrians.

[Mr. DEPUTY SPEAKER in the Chair.]

Then, sir, I will come to the point. The sponsors of Samyukta Karnataka and the leaders of the Samyukta Karnataka movement, laid great stress and great emphasis on the wishes of the people, that was one of the conditions for the formation of the United Karnataka. Regarding our border area, Sir, time and again the Marathi-speaking

people of the border areas, have expressed in unequivocal terms their desire, their keen desire to be integrated with Maharastra.

Sir, if you take the elections and bye-elections in the past five years, you will see that the Ekeekaran Samithi has won the major number of seats in the general elections in our area. Even in the recently held elections to the Panchayats and Taluk Boards, the Samithi has won the major number of seats. Sir, in Karwar taluk, out of 15 seats, 12 seats have been won by the M. E. Samithi. In Supa taluk, all the 15 seats have come to M. E. Samithi. In Khanapur taluk, out of 15, 9 seats are won. In Belgaum taluk, out of 19 seats, 13 seats are won by the M. E. Samithi. In all these elections, these are the wishes of the people. The people have manifested in unequivocal terms, the wishes of the people. We go further. We say 'apply any test or standard and we will prove our case'. We have been willing to accept any challenge. Take a plebiscite on this issue. We will prove by a plebiscite that we want to go to Maharashtra.

Sir, in the Address, the Governor was pleased to say that we have come much nearer to our ideal of establishing a Welfare State. Let me ask whether we are really heading towards a Welfare State. The question is whether we are heading to a Welfare State or to a Police State. I am speaking from my experience in the border areas. I can speak with authority on my area. There is actually Police Raj in the Marathi-speaking border areas. We are agitating for a political cause, for a just cause. Ours is a political agitation. The police are trying to suppress and repress our agitation by ruthless and merciless means. The police are doing so at the instance of Government, the police are not different from Government, they are part and parcel of the Government.

We resorted, as a last weapon or method, to no-tax campaign. Now, a no-tax campaign is not a revolt or rebellian against the Government. It was simply a form of protest, protest against the attitude and the policies of the Government in respect of the border problem. That was a political agitation, that was a form of protest. What did the police do ? They set aside all the provisions of law. They set aside all procedures of law and the police adopted their own methods of punishment, setting aside the law of the land and the provisions of the land revenue code. Their method was the lathi, tear-gass and fire. Thounds of people were beaten mercilessly. They were beaten, they were kicked, they were batoned. With the help of lathi, the police recovered land revenue arrears. The court also in one of the cases, has passed strong strictures against the attitude of the officers and the police. The police have committed all sorts of atrocities. The Superintendent of police, Belgaum town, has beat hundreds of people with his own lathi and rod. He has beaten even an M. L. A. He did not beat me. We are a peaceful people. We strictly follow the principles laid down by Gandhiji.

Sri H. M. CHANNABASAPPA.—I had an occasion to be at Belgaum and see how much our friends were peaceful.

Sri B. R. SUNTHANKAR— On the last first of November, throughout our border areas, we observed the day, the date of Reorganisation, the formation of new States, as protest day, protest against the inclusion of Marathi-speaking areas in Mysore State. Every year, we observe it. Last year also, we observed it by taking out mamoth processions and conducting meetings. Whenever we of the M. E. S. take out a procession the hand of the police comes upon us. Section 37 of the Bombay police Act is proclaimed and processions and meetings are banned. We take permission. So, on the last of November last, we took out a procession with the permission of the police. The routes were also prescribed. The procession started and it was quite peaceful. The processionists were shouting Maharashtra Samuktha slogans. All of a sudden, when the procession came in front of the market police station in Belgaum town, the police snatched an young boy on the pretest that he was shouting slogans concerning police atrocities. Three or four police constables surrounded him, began to beat the boy mercilessly and dragged him on to the police station. I was an eye-witnes to this scene. I was in the processin. I was at the head of the procession. This incidence took place in the middle of the procession. When I, with my colleagues, came down to the place. I saw that the police had taken that boy to the police station. I went to the police station and I was hearing screams from the station, the screams of the boy because the police were beating him mercilessly in the police station. When I went there and enquired, there was a police officer. The constables would not allow me in. So, I began seeking the police officer. Then I saw, all of a sudden, without any reason, the police began to beat the processionists. A lorry-load of police came there, the Reserve police was there and they began to beat indicsriminately whoever they came across. For a time, the procession was dispersed. This was an unwarranted and uprovoked action. There was absolutely no reason for this lathi charge. The procession was throughout peaceful. There was no occassion for the police to beat the people with lathi. Without giving any warning, they charged with lathi. There was not a single high police officer, the Dy. S. P. or the D. S. P. or the Executive Magistrate. One of the sub-inspectors, of his own accord, began to beat. The Secretary of the M. E. S., an advocate of the place, was beaten mercilessly by the sub-inspector. One police constable, his button number is 1527, was caught red-handed by one of the lady municipal counsellors to the Belgaum municipality—Dr. Mrs. Khade—while throwing stones at the procession.

And this fact was brought to the notice of the officers there. But instead of taking cognisance of this guilt on the part of the police constable, the police officer allowed that constable to run away from the place. This is how things are going on in our Marathi areas. The police officers there have adopted a very strange and peculiar technique. They beat the people and they also make the wounded people to face prosecutions in courts. Prosecutions are also launched against them. It is a very

strange techniqe. They beat the people and they prosecute them again. So Sir, there is no rule of law in marathi border areas. Unfortunately, we call this a democracy. In this democracy, 'demos' the people have no protection. People are without protection. This Government cannot give protectio ı because this Government is a party to the dispute. If we approach the Central Government, the Centre says that the law and order is within the jurisdiction of State Government and it cannot interfere.**

5 P.M.

As they have absolute majority, they are power drunk and they can say anything they like here.

Mr. DEPUTY SPEAKER.—I am here to judge.

Sri B. R. SUNTHANKAR.—My point was that the Marathi people in the border areas are unprotected. The hand of the law of this Country does not protect them.

As regards the linguistic minorities, there is no reference in this Address about safeguarding the interests of the linguistic minorities. This Government--I am speaking from my experience of the last four years--is indifferent and callous to the interests of the linguistic minorities and so, the linguistic minorities have to suffer in matters of employment, service, culture and so many other fields. This Government has failed to safeguard their interests. The Central Government has prepared a memorandum for safeguarding the interests of the linguistic minorities and that has been sent to all the State Governments, but this Government has failed to take any action on the recommendations in that memorandum. There are so many recommendations there and this Government has failed to take any action on them. So the linguistic minorities in this State remain unprotected and they have no safeguards and they have to suffer hardships in a number of ways at each and every step. There are not only Marathi people in this State, but there are other minorities also like Urdu speakers in the old Hyderabad area. The Government should safeguard their interests so that these linguistic minorities in the State may remain in this State.

With these remarks, I finish my speech.

ಶ್ರೀ ಟಿ. ಡಿ. ಮಾರಣ್ಣ (ಮಾಗಡಿ) :–ಅಧ್ಯಕ್ಷರೇ, ಈ ಸಭೆಯ ಮುಂದಿರುವ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಸಂಬಂಧದಲ್ಲಿ ಇದುವರೆಗೆ ಮಾತನಾಡಿದಂಥ ನಮ್ಮ ಸ್ನೇಹಿತರೊಡನೆ ನಾನೂ ಸೇರಿ ನನ್ನ ಮಿತ್ರರಾದಂಥ ಶ್ರೀ ನರಸಿಂಹರೆಡ್ಡಿಯವರಿಂದ ಮಂಡಿಸಲ್ಪಟ್ಟ ಈ ವಂದನಾ ನಿರ್ಣಯವನ್ನು ಅನುಮೋದಿಸುವುದಕ್ಕೆ ಮಾತ್ರ ನಾನು ನಿಂತಿದ್ದೇನೆ. ರಾಜ್ಯಪಾಲರ ಭಾಷಣವನ್ನು ವಿಮರ್ಶನಾತ್ಮಕ ದೃಷ್ಟಿಯಿಂದ ನಾವು ಪರಿಶೀಲನೆ ಮಾಡಿದ್ದೇ ಆದರೆ, ಅದನ್ನು ನಿಜವಾಗಿಯೂ ಅರ್ಥ ಮಾಡಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನೋಡುವುದಾದರೆ, ದೇಶವಲ್ಲಿ ಈ ಸರ್ಕಾರ ಸಾಕಷ್ಟು ಪ್ರಗತಿಯನ್ನು ಸಾಧಿಸಿರುವುದಾದರೂ ಸಹ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾದಿಸುವ ಅಗತ್ಯವಿದ್ದರೂ, ಈಗಾಗಲೇ ಸಾಧಿಸಿರತಕ್ಕ ಪ್ರಗತಿಯನ್ನು ಪರಿಶೀಲಿಸುವುದಾದರೆ ಕೇವಲ ಅಧನ್ನು ಒಂದು ಸಂಕುಚಿತ ದೃಷ್ಟಿಯಿಂದ ಅಳೆಯಬಾರದು ಎಂಬ ಅಂಶವು ರಾಜ್ಯಪಾಲರ

**Expunged as ordered by the Chair.

(ಶ್ರೀ ಟಿ. ಡಿ. ಮಾರಣ್ಣ)

ಭಾಷಣವನ್ನು ವಿಮರ್ಶನಾತ್ಮಕ ದೃಷ್ಟಿಯಿಂದ ನೋಡಿದರೆ ಅರ್ಥವಾಗುತ್ತದೆ. ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಈ ದೇಶದಲ್ಲಿ ನಮ್ಮ ಮೈಸೂರು ರಾಜ್ಯ ಅನೇಕ ವಿಧವಾದಂಥ ಎಡರು ತೊಂದರುಗಳನ್ನು ಎದುರಿಸಬೇಕಾಯಿತು. ಆದರೂ ಸಹ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಪ್ರತಿಯೊಂದು ಅಂಶವೂ ಕೂಡ ಸಾಕಷ್ಟು ಪ್ರಗತಿಯನ್ನು ರಾಜ್ಯ ಸರ್ಕಾರ ಸಾಧಿಸಿದೆಯೇ ಎನ್ನುವುದಕ್ಕೆ ಅಪರಿಮಿತವಾದಂತಹ ಅಂಕಿ-ಅಂಶಗಳನ್ನು ನಾವು ಕೊಡಬಹುದು. ಈಗ ತಾನೇ ನಾವು ಪ್ರಾರಂಭ ಮಾಡಲಿರುವ ಈ ವರ್ಷದ ಏಪ್ರಿಲ್ ತಿಂಗಳಿಂದ ಜಾರಿಗೆ ಬರಲಿರುವ ತೃತೀಯ ಪಾಂಚ ವಾರ್ಷಿಕ ಯೋಜನೆಯ ಒಂದು ಹಿನ್ನೆಲೆಯಲ್ಲಿ ದೇಶದ ಎಲ್ಲಾ ಚಟುವಟಿಕೆಗಳ ಒಂದು ಕ್ರೋಢೀಕರಣ ಅತ್ಯಗತ್ಯವಾಗಿದೆ. ಅದು ಬಿಟ್ಟು ಸಾಮಾನ್ಯವಾಗಿ ಇವತ್ತು ನಮ್ಮ ದೇಶದಲ್ಲಿ ಏನು ಕಾಣುತ್ತಿದೆಯೆಂದರೆ ಈಚೆಗೆ ವಿವಿಧ ಯೋಜನೆಗಳು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಪ್ರಾರಂಭ ವಾಗುತ್ತಿವೆ. ಈ ಯೋಜನೆಗಳ ಕಾರ್ಯಗತ ರಂಗದಲ್ಲಿ ಸಾರ್ವಜನಿಕ ನಾಯಕರು ಎಂದು ಹೇಳುವ ಜನಗಳು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಈ ಯೋಜನೆಯಲ್ಲಿ ತಮ್ಮ ಆತ್ಮಪೂರ್ವಕವಾದ ಸಹಕಾರವನ್ನು ನೀಡದಿದ್ದರೆ ಅಂತಹ ಯೋಜನೆಗಳು ಸಾಮಾನ್ಯವಾಗಿ ಕುಂಠಿತವಾಗುವುದು ಸ್ವಾಭಾವಿಕ. ಇದು ನಮ್ಮ ದೇಶದ ದುರಾದೃಷ್ಟವೋ ಏನೋ ಗೊತ್ತಿಲ್ಲ. ದೇಶದಲ್ಲಿ ನಮ್ಮ ಹಲವು ಸ್ನೇಹಿತರು ಯಾವ ಒಂದು ಟೀಕೆಯನ್ನಾಗಲೀ ಅದನ್ನು ರಚನಾತ್ಮಕ ದೃಷ್ಟಿಯಿಂದ ಮತ್ತು ದೇಶದ ಪ್ರಗತಿಯಾಗುವ ರೀತಿಯಲ್ಲಿ ಮಾಡದೆ ಕೇವಲ ವಿನಾಶಾತ್ಮಕ ದೃಷ್ಟಿಯಿಂದ ಟೀಕೆ ಮಾಡಿ ಇಂತಹ ಒಂದು ಅಗ್ಗದ ಪ್ರಚಾರ ಮೂಲಕ ಹೆಚ್ಚಿನ ಬೆಂಬಲವನ್ನು ಪಡೆಯಬಹುದಷ್ಟೆ. ಅದರಲ್ಲೂ ಈಗ ಶೇ. ೭೫ ರಷ್ಟು ಮಂದಿ ಅವಿದ್ಯಾವಂತರು ಇರುವಾಗ ಇಂತಹ ಒಂದು ಅಗ್ಗದ ಪ್ರಚಾರದಿಂದ ಜನರನ್ನು ಬೆಂಬಲಪಡಿಸಬಹುದು ಎಂಬ ಭಾವನೆ ನನ್ನ ಮಿತ್ರರಾದಂಥ ವಿರೋಧಪಕ್ಷದ ಕೆಲವರಲ್ಲಿ ಮೂಡಿರಬಹುದು, ನನಗನ್ನಿಸುತ್ತದೆ. ದೇಶದಲ್ಲಿ ಈ ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಯಲ್ಲಿ ಇವತ್ತು ಭಾರತ ದೇಶದಲ್ಲಿ ನಡೆಯತಕ್ಕ ರೀತಿ-ನೀತಿಗಳನ್ನು ನೋಡಿದ್ದೇ ಆದರೆ, ವಿರೋಧ ಪಕ್ಷದವರು ಇಂತಹ ಅಗ್ಗದ ಪ್ರಚಾರ ಪರಿಣಾಮದಲ್ಲಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುತ್ತೇವೆಂದು ಹೇಳುವುದು ನಿಜವಾಗಿ ಫಲಪ್ರದವಾಗಲಾರದು ಎಂದು ನಾನು ಹೇಳಬಯಸುತ್ತೇನೆ. ಒಂದು ವೇಳೆ ವಿರೋಧ ಪಕ್ಷದವರ ಕಡೆಗೆ ಆಡಳಿತ ಪಕ್ಷದ ಈ ಅಧಿಕಾರ ಹೋದರೆ, ಈ ದೇಶವನ್ನು ಸೃಷ್ಟಿ ಮಾಡಿದಂತಹ ದೇವರೇ ಅವರನ್ನು ಕಾಪಾಡಬೇಕಾಗಿದೆ.

ಇನ್ನು ದೇಶದಲ್ಲಿ ರಾಷ್ಟ್ರೀಯ ವಿಸ್ತರಣೆಯ ಯೋಜನೆ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆಯೇ ಇಲ್ಲವೇ ಎನ್ನುವುದನ್ನು ಆತ್ಮವಂಚನೆ ಮಾಡುವವರೆಲ್ಲರೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು, ಪ್ರಗತಿಯನ್ನು ಮರೆಮಾಚಿ ಉದ್ದೇಶಪೂರ್ವಕವಾಗಿ ಟೀಕೆಗೆ ಅವಕಾಶವನ್ನು ಕಲ್ಪಿಸಿಕೊಡುವಂತಹ ಜನರು ಸ್ವಾಭಾವಿಕವಾಗಿ ಇದ್ದಾರೆ. ಸಾಮಾನ್ಯವಾಗಿ, ಪ್ರಜಾಪ್ರಭುತ್ವದಲ್ಲಿ ವಿವಿಧರೂಪದ ಯೋಜನೆಗಳು ಯಶಸ್ವಿಯಾಗಿ ನಡೆದು ರಾಷ್ಟ್ರ ಪ್ರಗತಿ ಕಾರ್ಯವಾಗಬೇಕಾದರೆ ದೇಶದ ನಾಯಕರು ಮತ್ತು ಸಾಮಾನ್ಯ-ಜನರು ನಮ್ಮದು ಪ್ರಜಾಪ್ರಭುತ್ವ ಎಂದು ಅದಕ್ಕೆ ಸಹಕಾರ ಕೊಡಬೇಕು. ಅದರೆ ನಮ್ಮ ವಿವಿಧ ಪಾಂಚವಾರ್ಷಿಕ ಯೋಜನೆಗಳನ್ನು ಚೀಣಾ ಅಥವಾ ರಷ್ಯಾ ದೇಶಗಳಲ್ಲ ಮಾಡಿದಂತೆ ಇಲ್ಲಿ ಕಾರ್ಯ ರೂಪಕ್ಕೆ ತರುವುದರಲ್ಲಿ ಬಹಳ ಕಷ್ಟವಾಗುತ್ತದೆ. ನಮ್ಮಲ್ಲಿರತಕ್ಕ ಪ್ರಜಾಪ್ರಭುತ್ವದ ಒಂದು ಚೌಕಟ್ಟಿನಲ್ಲಿ ಸರ್ವರ ಸಹಕಾರದಿಂದ ಈ ಯೋಜನೆಗಳು ಯಶಸ್ವಿಯಾಗಬೇಕಾಗಿದೆ. ಚೀಣಾ ಮತ್ತು ರಷ್ಯಾದಲ್ಲಿರತಕ್ಕ ರಾಜ್ಯಭಾರ ವ್ಯವಸ್ಥೆಯೇ ಬೇರೆ. ಅಲ್ಲಿ ಯೋಜನೆಗಳನ್ನು ಕಾರ್ಯ ರೂಪಕ್ಕೆತರುವಾಗ ಸರ್ವಾಧಿಕಾರ, ಸಂಯುಕ್ತಾಧಿಕಾರ, ನಿರಂಕುಶಾಧಿಕಾರ ರೂಪದಲ್ಲಿ ಆಡಳಿತವನ್ನು ನಡೆಸುತ್ತಾರೆ. ನಾವು ತರುವಂತಹ ಪ್ರಜಾಪ್ರಭುತ್ವ ಶಾಂತಿಯುತವಾದ ರೀತಿಯಲ್ಲಿ ರಚಿಸುವುದರಿಂದ ಕೋಟ್ಯಂತರ ರೂಪಾಯಿಗಳನ್ನು ರೂಪಿಸಿದಂತಹ ವಿವಿಧ ಯೋಜನೆಗಳು ಕಾರ್ಯ

ರೂಪಕೆ ಬರುತ್ತಿವೆ. ಅವು ದೇಶದ ಪ್ರಗತಿಯ ದೃಷ್ಟಿಯಿಂದ ಸಾಧನೆಯಾಗಬೇಕಾದರೆ ಬರೀ ಟೀಕೆ ಮಾಡುತ್ತಾ ಅದನ್ನು ಒಂದು ಅಗ್ಗದ ಪ್ರಚಾರ ರೂಪದಲ್ಲಿ ಉಪಯೋಗಿಸಿಕೊಳ್ಳುವ ಒಂದು ವಿನಾಶಾತ್ಮಕ ರೀತಿಯನ್ನು ಬಿಟ್ಟು ರಚನಾತ್ಮಕವಾದ ರೀತಿಯಲ್ಲಿ ಈ ಆಡಳಿತ ಲೋಪದೋಷಗಳನ್ನು ಈಡೇರಿಸುವುದಕ್ಕೆ ವಿರೋಧಪಕ್ಷದ ಸ್ನೇಹಿತರು ಪ್ರಯತ್ನಪಡುವುದಾದರೆ ನಮ್ಮ ದೇಶದ ಪ್ರಗತಿಯನ್ನು ಇನ್ನೂ ಬಹು ಚೆನ್ನಾಗಿ ಸಾಧಿಸಬಹುದು ಎಂದು ನಾನು ಅಂದುಕೊಂಡಿದ್ದೇನೆ. ದೇಶದಲ್ಲಿ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆ ಕ್ರಮಬದ್ಧವಾಗಿ ನಡೆದಿರುವುದರಿಂದ ಇತ್ತೀಚಿನ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡಿನ ಚುನಾವಣೆಗಳ ಪರಿಣಾಮವಾಗಿ ಅಧಿಕಾರ ವಿಕೇಂದ್ರೀಕರಣ ಸಂಪೂರ್ಣವಾಗಿ ಆಗಿದೆ ಎಂದು ನನ್ನ ಭಾವನೆ. ಅಧಿಕಾರ ವಿಕೇಂದ್ರೀಕರಣವಾಗಿರುವ ವ್ಯವಸ್ಥೆಯೂ ಕೂಡ ಕಾರ್ಯರೂಪದಲ್ಲಿ ವ್ಯವಸ್ಥಿತವಾಗಿ ಅದರ ಮೂಲಭೂತವಾದ ತತ್ವ ದೇಶದ ಪ್ರಗತಿಗೆ ಅನುಕೂಲವಾಗಬೇಕಾದರೆ ಸಾಮಾನ್ಯ ಜನ ಅದರಲ್ಲೂ ನಾಯಕರು ಎಂದು ಹೇಳುವ ಜನ ಇದನ್ನು ಸದುಪಯೋಗಪಡಿಸಿಕೊಂಡು ದೇಶದಲ್ಲಿ ಜನಗಳಿಗೆ ಒಂದು ರೀತಿಯ ರಕ್ಷಣೆ ಕೊಟ್ಟು ಆ ಮೂಲಕ ಪ್ರಜಾಪ್ರಭುತ್ವ ಸುಭದ್ರವಾಗಿ ಕೆಲಸಮಾಡಿದರೆ ಈ ಯೋಜನೆ ಅತ್ಯಂತ ಯಶಸ್ವಿಯಾಗಿ ರೂಪುಗೊಂಡು ದೇಶದ ಪ್ರಗತಿಯನ್ನು ನಿರೀಕ್ಷಿಸಿದ್ದಕ್ಕಿಂತಲೂ ಇನ್ನೂ ಚೆನ್ನಾಗಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕಳೆದ ವರ್ಷ ಮಳೆ ಬೆಳೆ ಅಭಾವ ಸ್ವಲ್ಪ ಕಾಣಿಸಿಕೊಂಡಿತು. ಅದರ ಒಂದು ಪರಿಸ್ಥಿತಿಯನ್ನು ಸರಿಪಡಿಸುವ ದೃಷ್ಟಿಯಿಂದ ನಮ್ಮ ಸರ್ಕಾರದವರು ಅನೇಕ ನೀರಾವರಿ ಭಾವಿಗಳು, ತಕಾವಿ ಸಾಲಗಳು ಮತ್ತು ಗ್ರಾಮಾಂತರ ಪ್ರದೇಶದ ರಸ್ತೆಗಳ ವ್ಯವಸ್ಥೆಗಳು, ಇತ್ಯಾದಿ ಕೋಟ್ಯಾಂತರ ರೂಪಾಯಿನ ಖರ್ಚಿನಲ್ಲಿ ಸಕಾಲದಲ್ಲಿ ಕೈಗೊಂಡು ಮಾಡಿ ಮುಗಿಸಿದ್ದಾರೆ. ಈ ಪ್ರಗತಿಯನ್ನು ನಿರ್ಣಯ ಮನೋಭಾವದಿಂದ ನೋಡಬಾರದೆಂದು ನಮ್ಮ ಸ್ನೇಹಿತರಿಗೆ ಹೇಳುತ್ತೇನೆ.

ಆಹಾರೋತ್ಪತ್ತಿ ವಿಷಯದಲ್ಲಿ ಕೂಡ, ದೇಶದ ಟಾರ್ಜೆಟ್ ಅಥವ ಗುರಿ ಏನಿದೆಯೋ ಅದನ್ನು ತಲುಪಲು ಇನ್ನೂ ಅವಿಶ್ರಾಂತವಾಗಿ ದುಡಿಯಬೇಕಾಗಿದೆ: ಸರ್ಕಾರದವರೇನೋ ಒಂದು ಸದುದ್ದೇಶದಿಂದ ಅನೇಕ ಯೋಜನೆಗಳನ್ನು ರೂಪಿಸುತ್ತಾರೆ. ಆದರೆ ರಾಜಕೀಯ ದೇಶಾ ಸೂಯೆಗಳಿಂದ ದೇಶದಲ್ಲಿರತಕ್ಕ ಅನೇಕ ಪಕ್ಷಗಳು ಹಾಗೂ ಇತರ ವರ್ಗದವರು ಒಂದಲ್ಲ ಒಂದು ರೀತಿಯಲ್ಲಿ ನಿರರ್ಥಕಗೊಳಿಸುವ ಮನೋಭಾವದಿಂದ, ಸಾಬೆಟಾಬ್ ಮಾಡುವ ಮನೋಭಾವದಿಂದ, ಸ್ವಂತವಾದ ಮತ್ತು ಸ್ವಾರ್ಥ ಮನೋಭಾವ ದೃಷ್ಟಿಯಿಂದ ಸರ್ಕಾರ ಮಾಡತಕ್ಕಂಥ ಎಲ್ಲಾ ಯೋಜನೆಗಳನ್ನೂ ನಿರರ್ಥಮಾಡತಕ್ಕಂಥ ಒಂದೇ ಒಂದು ಮನೋಭಾವದಿಂದ, ಯೋಜನೆಗಳನ್ನು ಟೀಕೆ ಮಾಡುತ್ತಾ, ಅಡ್ಡಿ ಆತಂಕಗಳನ್ನು ಒಡ್ಡುತ್ತಾ ಹೋದರೆ ಯಾವ ಯೋಜನೆಯೂ ಸಹ ದೇಶದಲ್ಲಿ ಸುವ್ಯವಸ್ಥಿತವಾಗಿ ನಡೆಯಲಾರದು, ಮತ್ತು ಯೋಜನೆಗಳ ಮೂಲಕ ನಿರೀಕ್ಷಿಸಿದಷ್ಟು ಒಂದು ಫಲ ನಿರೀಕ್ಷಿದ ಕಾಲದಲ್ಲಿ ದೊರೆಯುವುದು ಕಷ್ಟವಾಗುವುದೆಂದು ನಮ್ಮ ವಿರೋಧ-ಪಕ್ಷದ ನಾಯಕರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಕುಟೀಕೆಗಳನ್ನು ಬಿಟ್ಟು, ಸದುದ್ದೇಶದಿಂದ ರಚನಾತ್ಮಕ ಟೀಕೆಗಳನ್ನು ಮುಂದಿಟ್ಟು, ರಾಜ್ಯಭಾರದ ಲೋಪದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನಮಾಡಲಿ ಎಂದು ಮನವಿ ಮಾಡುತ್ತೇನೆ.

ದೇಶದಲ್ಲಿ ಸಹಕಾರ ಕ್ಷೇತ್ರ [illegible] ಪ್ರಗತಿಯನ್ನು ಸಾಧಿಸಿದೆ. ಸಾಮಾನ್ಯವಾಗಿ 1960-61ನೇ ಸಾಲಿಗೆ 3727 ಸೇವಾ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿ ಪ್ರಾರಂಭವಾಗುತ್ತವೆ. ಈ ಸಹಕಾರ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಅವಿದ್ಯಾವಂತರೇ ಇರುವುದರಿಂದ, ದೇಶದಲ್ಲಿ ಜನಗಳಿಗೆ ಮಾರ್ಗದರ್ಶನ ತೋರತಕ್ಕಂಥವರು, ನಾಯಕರು ಎಂದು ಹೇಳಿಕೊಳ್ಳತಕ್ಕಂಥ ಜನ ಏನು ಇದ್ದರೋ ಅವರು ಅವಿದ್ಯಾವಂತ ಜನಸ್ತೋಮವನ್ನು ಒಳ್ಳೆಯ ಮಾರ್ಗದಲ್ಲಿ ಕೊಂಡೊಯ್ಯುವುದು ಜನನಾಯಕರುಗಳ ಕರ್ತವ್ಯ. ಅದು ಬಿಟ್ಟು

(ಶ್ರೀ ಟಿ. ಡಿ. ಮಾರಣ್ಣ)

ಅವಿದ್ಯಾವಂತ ಮತದಾರರ ಒಂದು ಮತದಾನವನ್ನು ಜನನಾಯಕರು ದುರುಪಯೋಗಪಡಿಸಿ ಕೊಳ್ಳಬಾರದು. ಸಹಕಾರ ಕ್ಷೇತ್ರಗಳ ವಿಕೇಂದ್ರೀಕೃತವಾಗಿರುವ ಆಡಳಿತ, ವ್ಯವಸ್ಥಾ ರೀತಿಯಲ್ಲಿ, ಯೋಗ್ಯ ರೀತಿಯಲ್ಲಿ ನಡೆಯಬೇಕಾದರೆ, ಅದರಲ್ಲಿ ಅನೇಕ ವಿಧವಾದಂಥ ಕುಂದು-ಕೊರತೆಗಳು, ಎಡರು ತೊಡರುಗಳು ಬರುತ್ತವೆ.

ಹಾಸನ ಮತ್ತು ಮಂಗಳೂರು ರೈಲ್ವೇ ಲೈನಿನ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಯಶಸ್ವಿಯಾಗಿ ಹೋರಾಡಿ ಮಂಜೂರು ಮಾಡಿಸಿದರೂ ಅದು ಅನೇಕ ವರ್ಷಗಳಿಂದ ದೇಶದಲ್ಲಿದ್ದಂಥ ಒಂದು ಕೊರತೆ. ಅದು ನಿಜವಾಗಿಯೂ ಅಭಿನಂದನೀಯವಾಗಿದೆ.

ದೇಶದಲ್ಲಿ ಇವತ್ತಿನ ಯಂತ್ರಯುಗದಲ್ಲಿ ಪ್ರತಿಯೊಂದು ನಿಮಿಷದಲ್ಲಿಯೂ ಕೂಡ ಎಲ್ಲಾ ವಿಧವಾದಂಥ ಕೈಗಾರಿಕೆ ಮತ್ತು ಇತರ ವಿಧವಾದಂಥ ಅಭಿವೃದ್ಧಿ ಕೆಲಸಗಳಿಗೆ ವಿದ್ಯುಚ್ಛಕ್ತಿ ಅತ್ಯಂತ ಹೆಚ್ಚಿನ ರೀತಿಯಲ್ಲಿ ಉಪಯೋಗವಾಗುತ್ತದೆ. ದೇಶದ ಪ್ರತಿಯೊಂದು ಗ್ರಾಮಕ್ಕೂ, ಪ್ರತಿಯೊಂದು ಪ್ರದೇಶಕ್ಕೂ ಕೂಡ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ ಕೈಗೊಂಡಿರತಕ್ಕಂಥ ಬೃಹತ್ ಯೋಜನೆಗಳಾದ ಶರಾವತಿ, ಭದ್ರ ಹೈಡ್ರೊ-ಎಲೆಕ್ಟ್ರಿಕ್ ಪ್ರಾಜೆಕ್ಟ್ ಮತ್ತು ತುಂಗಭದ್ರ ಹೈಡ್ರೊ-ಎಲೆಕ್ಟ್ರಿಕ್ ಪ್ರಾಜೆಕ್ಟ್ ಯೋಜನೆಗಳ ಪ್ರಗತಿಯನ್ನು ಅಳತೆಮಾಡುವುದಾದರೆ, ದೇಶದ ಕೈಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಇತರ ಎಲ್ಲಾ ಅಭಿವೃದ್ಧಿ ದೃಷ್ಟಿಯಿಂದಲೂ ದೇಶ ಹೆಚ್ಚಿನ ಪ್ರಗತಿ ಸಾಧನೆ ಮಾಡುವುದಕ್ಕೆ ಅನುಕೂಲವಾದ ವಿದ್ಯುಚ್ಛಕ್ತಿಯನ್ನು, ಕೇವಲ ಒಂದೆರಡು ವರ್ಷಗಳಲ್ಲಿ ದೇಶದಲ್ಲಿ ನಾವು ಉತ್ಪಾದನೆ ಮಾಡತಕ್ಕಂಥ ಪರಿಸ್ಥಿತಿ ಇರುವುದು ನಾವು ಸಂತೋಷ ಪಡಬೇಕಾದ ವಿಷಯವಾಗಿದೆ. ಈ ಒಂದು ವಿದ್ಯುಚ್ಛಕ್ತಿ ಪೂರ್ಣ ಉತ್ಪತ್ತಿ ಕಾಲ ತಲುಪಿದಾಗ, ಕೈಗಾರಿಕಾ ಪ್ರಪಂಚದಲ್ಲಿ ಕೈಗಾರಿಕೆಯು ಅಭಿವೃದ್ಧಿಗೊಂಡು, ಹೆಚ್ಚು ಮಂದಿ ವಿದ್ಯಾವಂತ ಜನಗಳಿಗೆ ನೌಕರಿ ದೊರೆಯುತ್ತದೆ; ಈ ನಿರುದ್ಯೋಗ ಪರಿಸ್ಥಿತಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಹೆಚ್ಚು ಅವಕಾಶವಾಗುತ್ತದೆ.

ಇಷ್ಟನ್ನು ಹೇಳಿ, ರಾಜ್ಯಪಾಲರು ದಯವಿಟ್ಟು ಮಾಡಿರುವ ಈ ಒಂದು ಭಾಷಣವನ್ನು ವಂದಿಸಲು ಮಂಡಿಸಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಒಪ್ಪಿ ಅನುಮೋದಿಸುತ್ತೇನೆ. ಮತ್ತು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಂತ್ರಿಗಳ ಖಾಲಿ ಕುರ್ಚಿಗಳ ಗಮನಕ್ಕೆ ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ಅನೇಕ ಲೋಪದೋಷಗಳನ್ನು ತರಬೇಕೆಂದು ಇಚ್ಛಿಸುತ್ತೇನೆ!

ರಾಜ್ಯಪಾಲರ ಭಾಷಣವನ್ನು ಕೇಳಿದರೆ, ಈ ಸರ್ಕಾರ ಸುಖೀರಾಜ್ಯವನ್ನು ಸ್ಥಾಪನೆ ಮಾಡುವ ಹಾದಿಯಲ್ಲಿ ಎಷ್ಟರಮಟ್ಟಿಗೆ ಹೋಗಿದೆಯೆಂದರೆ, ಸುಖೀರಾಜ್ಯ ಇನ್ನು ಎಲ್ಲಾ ಯಶವಂತಪುರದ ಮಗ್ಗುಲಗೆ ಬಂದು ನಿಂತ ಹಾಗೆ ಇದೆ. ಆದರೆ ಯಾರಿಗೆ ನೋಡಿದರೂ ಆಹಾರವಿಲ್ಲ, ಬಟ್ಟೆ ಇಲ್ಲ, ಸರಿಯಾದ ವಸತಿ ಸೌಕರ್ಯವಿಲ್ಲ, ಕುಡಿಯುವುದಕ್ಕೆ ನೀರು ಇಲ್ಲ. ಇಂಥ ಸುಖೀರಾಜ್ಯ ಸ್ಥಾಪನೆಯಲ್ಲಿ ನಮ್ಮ ಸರ್ಕಾರದವರು ಮುಂದಿದ್ದಾರೆ. ಎಲ್ಲ ದೇಶಗಳಿಗಿಂತಲೂ ಬಹಳ ಮುಂದಿದ್ದಾರೆ. ರಾಜ್ಯಪಾಲರೇ ಹೇಳಿರುವಂತೆ 6,200 ಗ್ರಾಮಗಳಿಗೆ ಇನ್ನೂ ಕುಡಿಯುವ ನೀರಿಲ್ಲವೆನ್ನುವುದನ್ನು ಒಪ್ಪಿಕೊಳ್ಳಲಿ. 6,200 ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿ ಇಲ್ಲವೆಂದರೆ, ಯಾವ ತರಹ ಸುಖೀರಾಜ್ಯದಲ್ಲಿದ್ದೇವೆನ್ನುವುದನ್ನು ಲೆಕ್ಕ ಹಾಕುವುದಕ್ಕೆ ಬಹಳ ಸುಲಭವಿರುತ್ತದೆ. ಹೀಗಿದ್ದೂ ಪ್ರತಿಯೊಬ್ಬರೂ ಮಾಡಿರತಕ್ಕ

ಟೀಕೆ-ಟಿಪ್ಪಣಿಗಳೂ ಸಹ ಸರಿಯಾಗಿಲ್ಲವೆಂದು ನಮ್ಮ ಮಿತ್ರರಾದ ಮಾರಣ್ಣನವರು ಹೇಳಿದರು. ಟೀಕೆ ಅನವಶ್ಯಕ : ಏಕೆಂದರೆ ನಮಗೆ ಇಷ್ಟೊಂದು ಮಂತ್ರಿಗಳು ಇದ್ದಾಗ್ಯೂ, ಅಧಿಕಾರಿಗಳು ಇದ್ದಾಗ್ಯೂ, ವಿಧಾನಸೌಧ ಬಿಲ್ಡಿಂಗಿನಲ್ಲಿ ನಮ್ಮ ಮೆಂಬರುಗಳು ಸುಖವಿರುವಾಗ, ಜನಗಳು ಕಷ್ಟದಲ್ಲಿದ್ದರೂ, ಏಕೆ ಟೀಕಿಸಬೇಕು ? ಮಿನಿಸ್ಟರುಗಳನ್ನು ಕೇಳಿಕೊಂಡು 10–20 ಕಮಿಟಿಗಳಿಗೆ ಹಾಕಿಸಿಕೊಂಡರೆ, ಇಲ್ಲಿ ಮಾಡತಕ್ಕಂಥ ಮೀಟಿಂಗ್ ಕೊಳ್ಳೆಗಾಲದಲ್ಲಿ ಮಾಡಿ, ಕೊಳ್ಳೆಗಾಲದಲ್ಲಿ ಮಾಡುವುದನ್ನು ಬಿಜಾಪುರದಲ್ಲಿ ಮಾಡಿ, ಟಿ.ಎ., ಡಿ.ಎ., ಸಲೀಸಾಗಿ ತೆಗೆದುಕೊಳ್ಳಬಹುದು. ಇಂಥ ಒಂದು ಘನಸರ್ಕಾರ ಇರುವಾಗ, ಎಲ್ಲಾ ಅನುಕೂಲಗಳೂ ಅವರಿಗಿರುವಾಗ ಏತಕ್ಕೋಸ್ಕರ ಟೀಕಿಸಬೇಕು? ಇನ್ನೂ ಹತ್ತು ಜನ ಮಂತ್ರಿಗಳಿದ್ದಿದ್ದರೆ ಚೆನ್ನಾಗಿತ್ತು; ಈಗ ನಾಲ್ಕು ಜನ ಮಾತ್ರ ಹೆಚ್ಚಾಗಿ ತೆಗೆದುಕೊಂಡಿರುತ್ತಾರೆ; ಯಾರ್ಯಾರು ಮಂತ್ರಿತ್ವ ನಿರೀಕ್ಷಿಸಿದ್ದರೋ, ಅವರುಗಳಿಗೆ ಅಸಮಾಧಾನವಾಗಿ ಆಗಲೇ ಇನ್ನೊಂದು ಗ್ರೂಪು ಕಾಂಗ್ರೆಸ್ಸಿನಲ್ಲಿ ಪ್ರಾರಂಭವಾಗುತ್ತಿದೆಯೆಂದು ಕೇಳಿದೆ. ಇನ್ನೂ ಹತ್ತು ಜನ ಮಂತ್ರಿಗಳನ್ನು ಈಗಲೇ ತೆಗೆದುಕೊಂಡುಬಿಟ್ಟಿದ್ದರೆ, ಜತ್ತಿಯವರು ಇನ್ನೂ ಎರಡು ವರ್ಷ ಕಾಲ ಸುಖವಾಗಿ ತಳ್ಳಬಹುದಾಗಿತ್ತು. ಅಂಥ ಸದವಕಾಶ ಅವರು ಕಳೆದುಕೊಂಡುಬಿಟ್ಟರಲ್ಲಾ ಎಂದು ವಿಷಾದವಾಗುತ್ತಿದೆ.

ಈಚಿನ ಸಂಬಳ-ಸಾರಿಗೆಗಳ ರಿವಿಜನ್ ನೋಡಿದರೆ, ನಮ್ಮ ಘನ ಸರ್ಕಾರದವರ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಷ್ಟರಮಟ್ಟಿಗಿರುತ್ತದೆಂದು ಗೊತ್ತಾಗುತ್ತದೆ. ಗೆಜೆಟೆಡ್ ಆಫೀಸರುಗಳ ಸಂಬಳಕ್ಕೆ 10–20 ಲಕ್ಷ ರೂಪಾಯಿ ಜಾಸ್ತಿಯಾಗಿದೆಯೇ ವಿನಾ, ಸಾಮಾನ್ಯ ನೌಕರನಿಗೆ ಎರಡು-ಮೂರು ರೂಪಾಯಿ ಕೂಡ ಜಾಸ್ತಿ ಬರುವುದಿಲ್ಲ. ಈ ಸರ್ಕಾರದ್ದು ಎಂಥ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎನ್ನುವುದನ್ನು ಜನತೆ ಅರ್ಥಮಾಡಿಕೊಳ್ಳಬೇಕಾಗಿದೆ. ನಿನ್ನೆಯ ದಿವಸ ಅನೇಕ ಸಂದರ್ಭಗಳಲ್ಲಿ ಮಂತ್ರಿಗಳು ಬಹಳ ನಿರ್ವಂಚನೆಯಿಂದ ಕೆಲಸ ಮಾಡುತ್ತಿದ್ದೇವೆಂದು ವಾದ ಮಾಡಿದರಂತೆ; ಅವರಲ್ಲಿ ಬಹಳ ಮಟ್ಟಿಗೂ ಎಲ್ಲರೂ ಲಾಯರುಗಳು; ಆದರೆ ಯಾವ ರೀತಿಯಾಗಿ ಆ ವಾದವನ್ನು ಜನತೆ ಮುಂದೆ ಸಮರ್ಥಿಸಿಕೊಳ್ಳಬಲ್ಲರು ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ.

ಈ ಮೈಸೂರು ದೇಶದಲ್ಲಿ ಅನೇಕ ಪ್ರಕರಣಗಳು ನಡೆದಿರುತ್ತವೆ. ಅವುಗಳ ಬಗ್ಗೆ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿಯನ್ನೊಪ್ಪಿಸಲು ಅನೇಕ ಸಮಿತಿಗಳನ್ನು ನೇಮಕ ಮಾಡಲಾಗಿದೆ. ಹೀಗೆ ಸಮಿತಿಗಳು ಒಂದೊಂದು ಪ್ರಕರಣಕ್ಕೆ ಒಂದೊಂದು ನೇಮಕವಾಗಿ ಅನೇಕ ವರ್ಷಗಳಾಗಿದೆ. ಆದರೆ ಕೆಲವಕ್ಕೆ ಮಾತ್ರ ರಿಪೋರ್ಟುಗಳು ಬಂದಿವೆ; ಇನ್ನು ಕೆಲವಕ್ಕೆ ಬಂದಿಲ್ಲ. ಆ ಅನೇಕ ಪ್ರಕರಣಗಳ ಬಗ್ಗೆ ಸರ್ಕಾರಕ್ಕೆ ಯಾವು ಯಾವುದು ಏನಾಗಿದೆ ಎಂಬ ವಿಚಾರ ಈ ಸಭೆಯ, ಸದಸ್ಯರಿಗೆ ಇದುವರೆಗೂ ಗೊತ್ತಾಗಲಿಲ್ಲ. ಆದರೆ ನಮ್ಮ ಸರ್ಕಾರ ಆ ಸಮಿತಿಗಳಿಗೆಲ್ಲ ಹಣವನ್ನೇನೋ ಯಥೇಚ್ಛವಾಗಿ ಖರ್ಚು ಮಾಡುತ್ತಿದೆ. ಆದರೆ ಆ ಸಮಿತಿಗಳ ಕಾರ್ಯಚಟುವಟಿಕೆಯನ್ನು ಮಾತ್ರ ಈ ಸಭೆಯ ಸದಸ್ಯರ ಗಮನಕ್ಕೆ ತರುತ್ತಿಲ್ಲ. ಇದು ಸುಖೀ-ರಾಜ್ಯ ಸ್ಥಾಪನೆಯ ಹಾದಿಗಳಲ್ಲಿ ಒಂದು. ಆದರೆ ನೆನ್ನೆಯ ದಿವಸ ನಾವು ಈ ಸಭೆಯಿಂದ ಎದ್ದು ಹೋದ ಮೇಲೆ ಯಾರೋ ಕೆಲವು ಮಂತ್ರಿಗಳು ''ಅವರು ಹೇಡಿಗಳು. ಅದಕ್ಕಾಗೇ ಅವರು ಹಾಗೆ ಓಡಿಹೋದರು'' ಎಂತ ಹೇಳಿದರಂತೆ. ಆ ರೀತಿ ನನಗೆ ವರ್ತಮಾನ ಬಂದಿದೆ. ಆದರೆ ನಮಗಿನ್ನೂ ಅಂಥ ಸನ್ನಿವೇಶಗಳೇನೂ ಒದಗಿರುವುದಿಲ್ಲ. ಅಂಥ ಭಯವೂ ಕೂಡ ನಮಗಿಲ್ಲ

ಶ್ರೀ ಜಿ. ದುಗ್ಗಪ್ಪ.—ಯಾರು ನಿಮಗೆ ಹಾಗೆ ಹೇಳಿದವರು ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಚೆ ಕಡೆ ಮಾನ್ಯ ಸದಸ್ಯರಾದ ಶ್ರೀ ದುಗ್ಗಪ್ಪನವರೇ ಹಾಗೆ ಹೇಳಿ ಈಗ ಇಲ್ಲಿ ಈ ರೀತಿ ಪ್ರಶ್ನೆ ಮಾಡಿದರೆ ನಾನು ಏನು ಹೇಳಬೇಕು!

(Sri G. DUGGAPPA *rose.*)

ಉಪಾಧ್ಯಕ್ಷರು.—ನೆನ್ನೆಯ ದಿವಸ ಮಾತನಾಡಿರತಕ್ಕ ಇಷ್ಯು ಮೇಲೆ ಈ ದಿವಸ ಪುನಃ ಮಾತನಾಡಬಾರದೆಂದು ಈಗಾಗಲೇ ತೀರ್ಮಾನವಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಾನು ನೆನ್ನೆ ದಿವಸ ಮಾತನಾಡಲೇ ಇಲ್ಲ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಶ್ರೀಮಾನ್ ದುಗ್ಗಪ್ಪನವರು ಇನ್ನು ಮೇಲೆ ಹಾಗೆ ಹೇಳಿಕೊಡಬಾರದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ನೇಮಕ ಮಾಡಿರತಕ್ಕ ಸಮಿತಿಗಳು ಸುಮಾರು 900 ಇವೆ. ಆದರೆ ಸರ್ಕಾರಕ್ಕೆ ರಿಪೋರ್ಟು ಬಂದಿಲ್ಲ. ಹಣ ಮಾತ್ರ ಈ ಕಮಿಟಿಗಳಿಗೆ ಅಪಾರವಾಗಿ ಖರ್ಚಾಗುತ್ತಿದೆ. ನಮ್ಮ ಸರ್ಕಾರ ಅನುಸರಿಸುತ್ತಿರುವ ಈ ಮಿತವ್ಯಯ ನೀತಿ ಯಾವುದೆಂಬುದನ್ನು ದೇಶದ ಜನರು ಅರಿತುಕೊಳ್ಳಬೇಕಾಗಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ಪಾಲಸಿ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಆದರೆ ಸರ್ಕಾರದ ಮಿತವ್ಯಯ ಪಾಲಸಿ ಬಗ್ಗೆ ಏನನ್ನೂ ಹೇಳಿಲ್ಲ. ಇನ್ನು ನಮ್ಮ ಮಂತ್ರಿಗಳಿಗೆಲ್ಲ ಪ್ರತಿಯೊಬ್ಬರಿಗೂ ಒಂದೊಂದು ಕಾರು ಇರುತ್ತೆ. ಇವು ಸರ್ಕಾರಿ ಕಾರುಗಳು. ಆಯಾಯಾ ಮಂತ್ರಿಗಳ ಸ್ವಕ್ಷೇತ್ರಗಳಲ್ಲಿ ಈ ಸರ್ಕಾರಿ ಕಾರುಗಳಲ್ಲಿ ಮಂತ್ರಿಗಳಿರದೆ ನಾಯಿ-ಬೆಕ್ಕುಗಳು ತಿರುಗುತ್ತಿರುತ್ತವೆ. ಮಂತ್ರಿಗಳಿಗೆ ಕೊಟ್ಟಿರತಕ್ಕ ಕಾರುಗಳ ಪರಿಸ್ಥಿತಿ ಈ ಮಟ್ಟಕ್ಕೆ ಇಳಿದಿದೆ! ಇದು ನಮ್ಮ ದೇಶದ ದುರ್ದೈವ-ದೌರ್ಭಾಗ್ಯವೆಂದು ನಾನು ಭಾವಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ಬೆಕ್ಕುಗಳು ಇರಬೇಡವೆ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇರಲಿ, ಆದರೆ ಅವಕ್ಕೆ ಕಾರುಗಳನ್ನು ತಿರುಗಲು ಕೊಟ್ಟಿಲ್ಲ.

ಇನ್ನು ಕ್ಷಾಮಪೀಡಿತ ಪ್ರದೇಶಗಳಲ್ಲಿ 15 ಸಾವಿರ ಬಾವಿಗಳನ್ನು ತೋಡಿಸಲು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರಂತೆ. ಶ್ರೀಮಂತರು ತೋಡುವ ಬಾವಿಗೂ ಮೂರು ಸಾವಿರ ರೂಪಾಯಿ ಸಾಲ, ಬಡವ ತೋಡಿಸುವ ಬಾವಿಗೂ ಮೂರು ಸಾವಿರ ರೂಪಾಯಿ ಸಾಲ! ಇದರ ಮೇಲೆ ಪ್ರತಿಯೊಂದು ಬಾವಿಗೂ 500 ರೂಪಾಯಿಗಳ ಸಬ್‌ಸಿಡಿಯನ್ನು ಕೊಡತಕ್ಕ ಏರ್ಪಾಡನ್ನು ಬೇರೆ ಮಾಡಿದ್ದಾರಂತೆ. ಅದೇನೋ ಹೇಳುತ್ತಾರೆ—ಯಾರೋ ಏನೇನೋ ಉಂಡೆಗಳನ್ನು ಕಟ್ಟಿ ಇಟ್ಟುಕೊಂಡಿದ್ದರಂತೆ. ಆಗ ಮಳೆ ಬದ್ದು ಆ ಉಂಡೆಗಳೆಲ್ಲ ಮಳೆ ನೀರಿನಲ್ಲಿ ಕರಗಿ ಒಂದೇ ಆಗಿಬಿಟ್ಟವಂತೆ. ಹಾಗೆ ಈ ಬಾವಿಗಳಿಗೆ ಸಾಲ ಕೊಡತಕ್ಕ ವಿಚಾರದಲ್ಲಿ—ಸರ್ಕಾರದವರ ನೀತಿ ''ಸಬ್‌ಲುಂಡಾ ಏಕೀಟ್ ಹೋಗಯಾ'' ಎಂದು ಹೇಳಿದಂತಿದೆ.

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಅದಕ್ಕೆ ನಾನು ಮತ್ತೇನು ಮಾಡಬೇಕಾಗಿತ್ತು ಹೇಳಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಒಂದು ಜಾಗದಲ್ಲಿ ಒಂದು ಸಾವಿರದಲ್ಲೇ ಒಂದು ಬಾವಿ ಆಗುತ್ತೆ. ಮತ್ತೊಂದು ಕಡೆ 12 ಸಾವಿರಕ್ಕೂ ಒಂದು ಬಾವಿ ಆಗುವುದು ಕಷ್ಟ. ಆದ್ದರಿಂದ ಸರ್ಕಾರದವರು ಈ ಸಾಲ ಕೊಡುವಾಗ ಆಯಾಯಾ ಜಾಗ ನೋಡಿ ಕೊಡಬೇಕಾದ್ದು ನ್ಯಾಯ. ಮಂತ್ರಿಗಳು ಟೂರ್ ಹೋಗುತ್ತಾರಲ್ಲ, ಆಗ ಏಕೆ ಈ ಕೆಲಸ ಮಾಡಬಾರದು?

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಸಾಲ ಕೊಡುವುದು ಅವರವರ ಆಸ್ತಿಯನ್ನು ಅವಲಂಬಿಸಿರುತ್ತದೆ. ಆದರೆ ಈ ಬಾವಿಗಳಿಗೆ ಕೊಡತಕ್ಕದ್ದು ಮಾತ್ರ ಮೂರು ಸಾವಿರ. ಅದನ್ನು ಮೂರು ಕಂತುಗಳಲ್ಲಿ ಕೊಡುತ್ತಾರೆ. ಬಾವಿ ಕೆಲಸ ಯಾವ ಆಳಕ್ಕೆ ಮುಗಿದರೆ ಅದಕ್ಕೆ ಅಷ್ಟೇ ಸಾಲ ಕೊಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಿಮ್ಮ ತಾಲ್ಲೂಕಿನಲ್ಲಿ ಹಾಗಿರಬಹುದು. ಆದರೆ ನಾನು ನೀರಿಗೆ ತುಂಬಾ ಅಭಾವವಿರುವ ತಾಲ್ಲೂಕಿನಿಂದ ಬರುತ್ತಿದ್ದೇನೆ. ಕ್ಷಾಮಪೀಡಿತ ಪ್ರದೇಶಗಳಲ್ಲಿ ಒಂದೊಂದು ಬಾವಿಗೂ ಏಕೆ ಸಾಕಾಗುವಷ್ಟು ಹಣ ಕೊಡಬಾರದು?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಒಂದು ಬಾವಿಗೆ ಮೂರು ಸಾವಿರ ಮಾತ್ರ ಸಾಲ ಕೊಡುತ್ತೇವೆ. ಆಸ್ತಿ ಮೇಲೆ ಸಾಲ ಕೊಡುವುದು ಈ ಯೋಜನೆಯಲ್ಲಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಯ್ಯೋ ಪರಮಾತ್ಮ! ಶಿವ-ಶಿವ ಇವರು ದುಡ್ಡನ್ನು ಕೊಡುವುದಕ್ಕೆ ಎಷ್ಟು ಕಷ್ಟಪಡುತ್ತಿದ್ದಾರೆ! ಇವರ ಒಳನೀತಿ ಹೀಗಿದ್ದಾಗ್ಯೂ ಹೊರಗಡೆ ಇವರು ದೇಶದಲ್ಲಿ ಹೆಚ್ಚು ಆಹಾರ ಉತ್ಪತ್ತಿಗಾಗಿ ತುಂಬಾ ಶ್ರಮಪಡುತ್ತಿದ್ದಾರಂತೆ! ಆದರೆ ನಾನೀಗ ಶ್ರೀಮಂತರ ವಿಚಾರ ಹೇಳುತ್ತಿಲ್ಲ. ಸಾಮಾನ್ಯಜನರ ವಿಷಯ ಹೇಳುತ್ತಿದ್ದೇನೆ. ಯಾವಯಾವ ಪ್ರದೇಶದಲ್ಲಿ ಒಂದು ಬಾವಿ ತೆಗೆಯಲು ಎಷ್ಟು ಹಣ ಬೇಕೋ ಅಷ್ಟನ್ನಾದರೂ ಕೊಡಿ. ಇನ್ನು ಇಲ್ಲಿಯವರೆಗೆ ಅಲ್ಲಲ್ಲಿ ಕೆಲವು ಬಾವಿಗಳಿಗೆ ಅರ್ಧಂಬರ್ಧ ಹಣ ಕೊಟ್ಟು ಬಾಕಿ ಹಣ ಕೊಡದೆ ನಿಂತಿರುವುದರಿಂದ ಈಗ ಆ ಬಾವಿಗಳೆಲ್ಲ ದಡ ಕುಸಿದು ಬೀಳುವ ಸ್ಥಿತಿಗೆ ಬಂದಿದೆ. ಮೇಲಾಗಿ ಯಾವ ಕಾಲದಲ್ಲಿ ಬಾವಿ ತೆಗೆದರೆ ಅನುಕೂಲ ಎಂಬುದನ್ನೂ ಸಹ ಸರ್ಕಾರದವರು ಅರಿತಿರಬೇಕು. ಬೇಸಿಗೆಯಲ್ಲಿ ಆಳವಾಗಿ ತೆಗೆಯ ಬೇಕಾಗಿದ್ದ ಬಾವಿಗಳನ್ನು ತೆಗೆಸುವುದು ಅನುಕೂಲ. ಮಳೆ ಹೆಚ್ಚಾಗಿ ಬೀಳುವ ಕಡೆಯಲ್ಲೂ ಬೇಸಿಗೆಯೇ ಬಾವಿ ತೆಗೆಯಲು ಅನುಕೂಲ. ಕ್ಷಾಮ ಪ್ರದೇಶಗಳಲ್ಲಿ ಯಾವಾಗ ಬೇಕಾದರೂ ತೆಗೆಯಬಹುದು. ಮೇಲಾಗಿ ಕ್ಷಾಮಪೀಡಿತ ಪ್ರದೇಶಗಳಿಗೆಲ್ಲ ಸರ್ಕಾರದವರೇ ಬೋರ್‌ವೆಲ್ ಮಿಷಣ ತರಿಸಿ ಅಲ್ಲಿ ಬಾವಿಗಳನ್ನು ತೆಗೆದು ಆ ಬಾವಿಗಳಿಗೆ ಕರೆಂಟನ್ನೂ, ಪಂಪ್‌ಸೆಟ್‌ಗಳನ್ನೂ ಸರಬರಾಯಿ ಮಾಡಿ ಆ ಸಾಲವನ್ನೆಲ್ಲಾ 15-20 ವರ್ಷಗಳ ವಾರ್ಷಿಕ ಕಂತುಗಳಲ್ಲಿ ವಸೂಲ್ಮಾಡಿ-ಕೊಂಡರೆ ಅನುಕೂಲವಾಗುತ್ತದೆ. ಕ್ಷಾಮಪೀಡಿತ ಪ್ರದೇಶಗಳಿಗೆ ಹೀಗೆ ಮಾಡಿದರೆ ಒಳ್ಳೆಯದಾಗುತ್ತೆಂತ ನಾನು ಸಲಹೆಮಾಡುತ್ತೇನೆ.

ಆದರೆ ಇತ್ತೀಚೆಗೆ ಸರ್ಕಾರದವರು ಮಂತ್ರಿಮಂಡಳವನ್ನು ಜಾಸ್ತಿಮಾಡಿ ಅನೇಕರಿಗೆ ಪ್ರಾತಿನಿಧ್ಯ ಸಿಕ್ಕುವಂತೆ ಮಾಡಲಾಗಿದೆ ಎಂತ ಹೇಳಿದ್ದಾರೆ. ಆದರೆ ನಾನು ನನ್ನ ಪರವಾಗಿ ಹೇಳುವುದಾದರೆ ಈ ಹಿಂದೆ ಅದೇ ಕಾಂಗ್ರೆಸ್ ಗುಂಪಿನಲ್ಲಿ ಈಗಿರತಕ್ಕ ಮಂತ್ರಿಮಂಡಲದ ಮೇಲೆ 29 ಛಾರ್ಜುಗಳನ್ನು ತಂದಿದ್ದರು.

ಉಪಾಧ್ಯಕ್ಷರು.—ಆ ವಿಚಾರವನ್ನೇಕೆ ಪುನಃ ಎತ್ತುತ್ತೀರಿ? ನಿಮಗೆ useful ಆಗಿರತಕ್ಕ ವಿಚಾರಗಳೇನಾದರೂ ಇದ್ದರೆ ಅವನ್ನು ಹೇಳಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಾಗಲ್ಲ ಸ್ವಾಮೀ, ಅವರ ಪಕ್ಷದವರು ಮಾಡಿದ್ದು 29 ಛಾರ್ಜುಗಳು, ಈಗ ಅದೇ ಆಪಾದನೆ ತಂದಿದ್ದ ಗುಂಪಿನ ಮೇಲೆ ಮಂತ್ರಿಮಂಡಳದ ಗುಂಪಿನವರು ತಂದಿದ್ದ ಛಾರ್ಜುಗಳು 29. ನಾವೀಗ ತಂದಿರುವ ಛಾರ್ಜುಗಳು 100. ಇವೆಲ್ಲ ಒಟ್ಟು 159 ಛಾರ್ಜುಗಳಾಗುತ್ತವೆ. ಆದರೆ ಆ ಕಾಂಗ್ರೆಸ್ ಗುಂಪಿನಲ್ಲೇ ಇನ್ನೂ ಕೆಲವರಿಗೆ ಈ ಮಂತ್ರಿಮಂಡಳದ ವಿಸ್ತರಣೆಯಿಂದ ಸಮಾಧಾನ ಆಗಿಲ್ಲವಂತೆ! ಇಂಥ ಒಂದು ಕಷ್ಟದ ಒಪ್ಪಂದಕ್ಕೆ ಈ ಮಂತ್ರಿಗಳೇಕೆ ಒಪ್ಪಿಕೊಂಡರೋ ನನಗೆ ತಿಳಿಯಲಿಲ್ಲ. ಇಷ್ಟೇ ಅಲ್ಲ. ಕೆಲವು ಹಳೇ ಮಂತ್ರಿಗಳು ತಮಗಿದ್ದ ಒಳ್ಳೇ ಖಾತೆಗಳು ಹೋಗಿಬಿಟ್ಟುವಲ್ಲ ಎಂತ ಅವರಿಗೊಂದು ವ್ಯಥೆ ಆಗಿದ್ದರೆ, ಇನ್ನು ಕೆಲವು ಹೊಸ ಮಂತ್ರಿಗಳಿಗೆ ನಮಗೇನೂ ಒಳ್ಳೇ ಖಾತೆಗಳು ಸಿಗಲಿಲ್ಲ ಎಂಬ ವ್ಯಥೆಗೊಳಗಾಗಿದ್ದಾರಂತೆ!

5-30 P.M.

ಮಾನ್ಯ ಮಿತ್ರರಾದ ವೀರಪ್ಪನವರು ಹೇಳಿದ ಹಾಗೆ ಹೊರಗಡೆಯಿಂದ ತರಿಸಿರುವ 13 ಸಾವಿರ ಟನ್ ಅಕ್ಕಿಯಲ್ಲಿ ಬಹುಭಾಗ ಉಪಯೋಗಕ್ಕೆ ಬಾರದಂತಾಗಿದೆ. ಹೊಸ ಬತ್ತವನ್ನೂ ಮಿಲ್ಲುಗಳಿಗೆ ಹಾಕಿ ಅಕ್ಕಿಯನ್ನು ಶೇಖರಣೆಮಾಡಿದರೆ ಅಂಥ ಅಕ್ಕಿಯ ಗತಿ ಏನಾಗುತ್ತದೆ. ಇಂಥ ಅಕ್ಕಿಯನ್ನು ತೆಗೆದುಕೊಳ್ಳಲು ಸಕ್ಕರೆ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಇಂಥ ತಿನ್ನಲ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಅರ್ಹವಾಗಿಲ್ಲದ ಅಕ್ಕಿಯನ್ನು ತಿನ್ನಬೇಕಾದರೆ, ನಮ್ಮ ದೇಶದಲ್ಲಿ ಆಹಾರದ ವಿಷಯದಲ್ಲಿ ಸ್ವಯಂ ಪೂರ್ಣತೆಯನ್ನು ಸಾಧಿಸಿದ್ದೇವೆ ಎಂದು ಹೇಳುತ್ತಾರಲ್ಲಾ ! ಇದು ಹೇಗೆ ಎಂದು ಕೇಳುತ್ತೇನೆ. ಸುಗ್ಗಿ ಕಾಲದಲ್ಲಿಯೇ ರೂಪಾಯಿಗೆ ಎರಡು ಸೇರು ರಾಗಿ ಸಿಕ್ಕುತ್ತಿರುವುದು ಸುಖೀರಾಜ್ಯದ ಲಕ್ಷಣವೇ? ಸಂಬಳ ಸಾರಿಗೆಗಳ ವಿಷಯ ತೆಗೆದುಕೊಂಡರೆ ಒಬ್ಬರಿಗೆ ಮೂರು ಸಾವಿರ ರೂಪಾಯಿ ಕೊಡುವಾಗ ಕನಿಷ್ಠ 14 ರೂಪಾಯಿ ಸಂಬಳ ಪಡೆಯುವ ಮನುಷ್ಯನೂ ಇದ್ದಾನೆ. ಕೇಳಿದರೆ ಇವರೆಲ್ಲ ಹಂಗಾಮಿ ನೌಕರರು ಎಂದು ಹೇಳುತ್ತಾರೆ. ಹಂಗಾಮಿ ಯಾವುದೋ, ಖಾಯಂ ಯಾವುದೋ ಗೊತ್ತಿಲ್ಲ. ಇವರನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿದೆ. ಇವರು ಸಮತಾವಾದ ಸಮಾಜದ ನಿರ್ಮಾತೃಗಳು.

ಆರೋಗ್ಯ ಇಲಾಖೆಯ ವಿಷಯ ತೆಗೆದುಕೊಂಡರೆ ಅನುಕೂಲಸ್ಥರಿಗೆ ಅನುಕೂಲಗಳುಂಟಾಗ ತಕ್ಕ ಸಂದರ್ಭಗಳಿವೆ. ಬಡವರಿಗೆ ಉಪಕಾರವಾಗಲೆಂದು ದಾನ ಕೊಟ್ಟಿರುವ ಹಣವನ್ನು ಉಪಯೋಗಿಸುವುದಕ್ಕೆ ನಮ್ಮ ಸರ್ಕಾರಕ್ಕೆ ಬಹಳ ಅಸಾಧ್ಯವಾಗಿದೆ. ಉದಾಹರಣೆಗೆ ಹೇಳುವುದಾದರೆ ತಿಪಟೂರಿನಲ್ಲಿ ಒಬ್ಬರು ದಾನಿಗಳು 10-12 ವರ್ಷಗಳ ಹಿಂದೆ ಹನ್ನೆರಡು ಸಾವಿರ ರೂಪಾಯಿ ದಾನ ಕೊಟ್ಟರು. ಇವೊತ್ತಿನವರೆಗೂ ವಾರ್ಡ್‌ಗಳನ್ನು ಕಟ್ಟಿಸಲಿಲ್ಲ. ಅವರು ನೂರಾರು ಸಲ ಬಂದು ಮಂತ್ರಿಗಳನ್ನೂ, ಮುಖ್ಯ ಮಂತ್ರಿಗಳನ್ನೂ ಕಂಡು ಹೋಗಿದ್ದಾರೆ. ಸಾಲದ್ದಕ್ಕೆ ಅಲ್ಲಿನ ಆಸ್ಪತ್ರೆಯಲ್ಲಿ ನಾಲ್ಕು ತಿಂಗಳಿನಿಂದ ಲೈಟ್ ಇಲ್ಲ, ದೀಪಗಳಿಲ್ಲದೇಯಿರುವಾಗ ರಾತ್ರಿ ವೇಳೆ ಹೆರಿಗೆ ಹೇಗೆ ಮಾಡಬೇಕು?

ಶ್ರೀ ಕೆ. ಕೆ. ಹೆಗ್ಗಡೆ.—ತಿಪಟೂರಿಗೆ ಒಂದು ದೊಡ್ಡ ಆಸ್ಪತ್ರೆಯನ್ನು ಮಂಜೂರು ಮಾಡಿರು ಮಾಡಿರುವುದು ತಮಗೆ ಗೊತ್ತಿರಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ದಾನಿಗಳು 12 ಸಾವಿರ ರೂಪಾಯಿ ಕೊಟ್ಟಿರುವುದು ಹೆರಿಗೆ ವಾರ್ಡುಗಳನ್ನು ಕಟ್ಟಲು. ದೊಡ್ಡ ಆಸ್ಪತ್ರೆ ಕಟ್ಟಡಕ್ಕಲ್ಲ. ಅವರ ಕುಟುಂಬದ ಹೆಸರಿನಲ್ಲಿ ಈ ಹಣವನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಕೆ. ಹೆಗ್ಗಡೆ.—ಸಿಕ್ಕಾಪಟ್ಟೆ ಆಸ್ಪತ್ರೆಯನ್ನು ಕಟ್ಟಲಿಕ್ಕೆ ಆಗುತ್ತದೆಯೇ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—''ಒಳ್ಳೆ ಕಳ್ಳೆಕಾಯಿ ಇದೆಯೇನಪ್ಪ ''ಅಂದರೆ'' ಮಂಚಿ ಬೆಲ್ಲ ಮುಂದಿ ನಾಯನ್ನ '' ಎಂದು ಹೇಳಿದ ಹಾಗೆ ಏನೋ ಕೇಳಿದರೆ ಏನೋ ಹೇಳುತ್ತಾರೆ. ನಾಲ್ಕು ತಿಂಗಳಿನಿಂದ ಲೈಟ್ ಇಲ್ಲ ಎಂದು ಹೇಳಿದರೆ ಅಲ್ಲಿನ ಪರಿಸ್ಥಿತಿ ಏನು ಎಂದು ಅರ್ಥ ಮಾಡಿಕೊಳ್ಳಬಾರದೇ? ದಾನಿಗಳು ಯಾವುದೋ ಒಂದು ಉದ್ದೇಶಕ್ಕಾಗಿ ಹಣ ಕೊಟ್ಟಿದ್ದಾರೆ. ಆ ಹಣವನ್ನು ಅವರು ಕೊಟ್ಟಿರುವ ಉದ್ದೇಶಕ್ಕಾಗಿ ಖರ್ಚು ಮಾಡಿಲ್ಲವೆಂದು ಅವರು ಕೋರ್ಟಿಗೆ ಹೋಗುವ ಸಂದರ್ಭವಿದೆ. ತಿಪಟೂರಿನಲ್ಲಿ ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿದರೆ ಹೆರಿಗೆ ವಾರ್ಡ್‌ಗಳನ್ನು ಕಟ್ಟಿಸಬಾರದೆಂದಲ್ಲ.

ಸಹಕಾರ ಮಾರ್ಕೆಟ್ ಎನ್ನುವುದು ಒಳ್ಳೆಯವರ ಕೈಗೆ ಸಿಕ್ಕಿದ ಹಾಗಾಗಿದೆ. ಎರಡು ತಿಂಗಳಿನಿಂದ ತಿಪಟೂರಿನಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಕೊಬ್ಬರಿ ವ್ಯಾಪಾರವಾಗದೆ ನಿಂತು-ಹೋಗಿದೆ. ಮಾರ್ಕೆಟ್ಟಿಗೆ ಹೋಗಲು ರಸ್ತೆಯಿಲ್ಲ, ನೀರಿನ ಸೌಕರ್ಯವಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ ಎಂದು ಮಾಡಿ, ರೈತರ ಮೇಲೆ, ವರ್ತಕರ ಮೇಲೆ ಸುಂಕ ಹಾಕಿರುವುದನ್ನು ಅವರು ಕೊಡುತ್ತಿದ್ದರೂ ಅವರಿಗೆ ಏನು ಸೌಲಭ್ಯವನ್ನೊದಗಿಸಿದ್ದೀರಿ! ಅಲ್ಲಿ ನಲ್ಲಿಗಳಿಲ್ಲ. ಮುನಿಸಿಪಾಲಿಟಿಯವರು ಸುಂಕ ವಸೂಲ್ಮಾಡುತ್ತಾರೆ. ಆದರೆ ಕನಿಷ್ಠಪಕ್ಷ ಹತ್ತು ನಲ್ಲಿಗಳನ್ನಾದರೂ ಒದಗಿಸಲು ಆಗಿಲ್ಲ.

ಶ್ರೀ ಮಾಲಿ ಮರಿಯಪ್ಪ.—ಈಗ ಅಲ್ಲಿರುವ ಬಾವಿಯಲ್ಲಿ ಸಾಕಷ್ಟು ಅನುಕೂಲವಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—20 ಸಾವಿರ ರೂಪಾಯಿಗಳನ್ನು ಸುಂಕದ ರೂಪದಲ್ಲಿ ವಸೂಲ್ಮಾಡುವಾಗ, ಸಾವಿರಾರು ಗಾಡಿಗಳು ಸೇರುವಾಗ, ಮಂತ್ರಿಗಳು ಹೀಗೆ ಹೇಳಿದರೆ ಏನು ಮಾಡುವುದಕ್ಕಾಗುತ್ತದೆ? ಪೂರ್ವದಲ್ಲಿ ಕುಡಿಯುವ ನೀರನ್ನು ಗಡಿಗೆಗಳಲ್ಲಿ ತೆಗದು-ಕೊಂಡು ಹೋಗುತ್ತಿದ್ದರು. ಈಗಲೂ ಹಾಗೆಯೇ ಮಾಡಲಿ ಎಂದು ಹೇಳುವಂತೆ ಕಾಣುತ್ತದೆ.

ಶ್ರೀ ಮಾಲಿ ಮರಿಯಪ್ಪ.—ತುರ್ತು ಇರುವ ಬಾವಿಯನ್ನು ಉಪಯೋಗಿಸಿಕೊಂಡರೆ ಮುಂದೆ ನಲ್ಲಿ ಹಾಕುವ ವಿಷಯವನ್ನು ಪರಿಶೀಲಿಸಬಹುದು. ಮಾರ್ಕೆಟ್ಟಿಗೆ ಹೋಗಲು ಸರಿಯಾದ ರಸ್ತೆಯಿಲ್ಲ, ಕುಡಿಯಲು ನಲ್ಲಿ ನೀರೇ ಆಗಬೇಕೆಂದು ಹೇಳುವುದು ಸರಿಯಲ್ಲ. ಕ್ರಮೇಣ ಎಲ್ಲ ಆಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸಾಹುಕಾರರು ನಲ್ಲಿ ನೀರು ಬೇಕೆಂದು ಹೇಳುತ್ತಿದ್ದಾರೆ. ನಿಮಗೆ ನೀರು ಕುಡಿಸುವುದಕ್ಕೆ ಬರುವುದಿಲ್ಲ, ಅವರು ನಿಮಗೆ ನೀರು ಕುಡಿಸುವುದಕ್ಕೆ ಹೈಕೋರ್ಟಿಗೆ ಹೋಗಿದ್ದಾರೆ.

ಅರಣ್ಯದ ವಿಷಯ ತೆಗೆದುಕೊಂಡರೆ, ಅರಣ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ. ಹಿಂದೆ ಅರಣ್ಯದಲ್ಲಿದ್ದರು ಎಂದು ಕಾಣುತ್ತದೆ, ಈಗ ಮತ್ತೆ ಬಂದಿದ್ದಾರೆ. ಹಿಂದೆ ಹಳ್ಳಿಗಳಲ್ಲಿ ಕಾಡು ಬೆಳೆಸಬೇಕೆನ್ನುವ ಉದ್ದೇಶದಿಂದ ಗೋಮಾಳಗಳನ್ನೆಲ್ಲ ಎಕರೆಗೆ 25 ರೂಪಾಯಿನಂತೆ ಗ್ರಾಂಟ್ ಕೊಟ್ಟು ಉಳುಮೆ ಮಾಡಿಸಿದರು. ಉಳುಮೆ ಮಾಡಿಸಿ ಮೂರು ವರ್ಷಗಳಾದರೂ ಇನ್ನೂ ಏನೂ ಮಾಡಿಲ್ಲ. ನಾಲ್ಕಾರು ಎಕರೆಗೆ ಸಸಿಗಳನ್ನು ಹಾಕುತ್ತೇವೆಂದು ವಾಗ್ದಾನ ಮಾಡಿ ಗೋಮಾಳಗಳನ್ನು ಉಳುಮೆ ಮಾಡಿಸಿ ಸಾವಿರಾರು ರೂಪಾಯಿ ಗ್ರಾಂಟನ್ನು ಕೊಟ್ಟಿರುತ್ತಾರೆ. ಆದರೆ ಯಾವ ಸಸಿಯನ್ನೂ ಹಾಕಿಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ಯಾರು, ಯಾವಾಗ ಹೇಳಿದರು ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಎದುರಿಗೇ ಇದ್ದಾರೆ. ಒಬ್ಬರನ್ನು ತೀರ ಹೊರಗೆ ಹಾಕುವುದಕ್ಕೆ ಹೋಗುವುದಿಲ್ಲ. ಗೋಮಾಳಗಳಲ್ಲಿ ಸಸಿ ಹಾಕಿ, ಎರಡು ವರ್ಷ ಕಾಪಾಡಿ ನಂತರ ಆಯಾ ಗ್ರಾಮ ಪಂಚಾಯಿತಿಗಳಿಗೆ ಬಿಟ್ಟು ಅವರು ಅದರ ಲಾಭ ಪಡೆಯುವಂತೆ ಮಾಡಬೇಕು ಎಂದು ಹೇಳಿದ್ದರು.

ಶ್ರೀ ಕೆ. ಎಫ್. ಪಾಟೀಲ್.—ಗ್ರಾಮ ಪಂಚಾಯಿತಿಗಳಲ್ಲಿ ಕಾಡು ಇದ್ದರೆ, ಆ ಗ್ರಾಮದ ಗೋಮಾಳವನ್ನು ಕೊಡಲು ಪಂಚಾಯಿತಿಯವರು ಊರಿನವರು ಒಪ್ಪಿದರೆ, ಪಂಚಾಯಿತಿ ಮುಂದೆ ಗಿಡಗಳನ್ನು ಸಂರಕ್ಷಣೆ ಮಾಡುತ್ತೇವೆ ಎಂದು ಒಪ್ಪಿಕೊಂಡರೆ ಅಂಥ ಸಂದರ್ಭಗಳಲ್ಲಿ ಮಾತ್ರ ಸರ್ಕಾರ ಸಸಿಗಳನ್ನು ನೆಡುವ ಕೆಲಸ ಮಾಡುತ್ತದೆ. ಈ ರೀತಿ ಹತ್ತಾರು ಹಳ್ಳಿಗಳಲ್ಲಿ ಮಾಡಿರುವುದುಂಟು. ತುಮಕೂರು ಜಿಲ್ಲೆಯಲ್ಲಿಯೇ ನಾಲ್ಕಾರು ಹಳ್ಳಿಗಳಲ್ಲಿ ಮಾಡಿದ್ದುಂಟು. ಹಳ್ಳಿಯವರು ಮುಂದೆ ಬರದೆ ಸರ್ಕಾರ ಏನು ಮಾಡುವುದಕ್ಕಾಗುತ್ತದೆ? ಗುಣಿಗಳನ್ನು ತೆಗೆದರೆ ಸಸಿಗಳನ್ನು ಹಾಕಿಸಬಹುದು ಎಂದರೆ ಮಾನ್ಯ ಸದಸ್ಯರು ತಪ್ಪು ಅಭಿಪ್ರಾಯ ಮಾಡಿಕೊಂಡಿರಬಹುದು, ಅಥವಾ ದುರುದ್ದೇಶದಿಂದ ಹೀಗೆಲ್ಲ ಹೇಳುತ್ತಿರಬಹುದು ಅಷ್ಟೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ದುರುದ್ದೇಶದಿಂದ ನಾನು ಹೇಳುತ್ತಿಲ್ಲ. ನನಗೆ ಆ ಉದ್ದೇಶವಿದ್ದಿದ್ದರೆ ತಮ್ಮ ಹತ್ತಿರ ಹೇಳುತ್ತಿರಲಿಲ್ಲ. ನಾನು ಪ್ರಯಾಣದ ಖರ್ಚನ್ನೂ ಬೇಕಾದರೆ ಕೊಡುತ್ತೇನೆ. ನಿಮ್ಮ ಕಾರಿಗೆ ಪೆಟ್ರೋಲ್ ಹಾಕಿಸುತ್ತೇನೆ. ಸ್ಥಳಕ್ಕೆ ಹೋಗಿ ನೋಡಿಕೊಂಡು ಬರೋಣ, ಬನ್ನಿ.

ಶ್ರೀ ಕೆ. ಎಫ್. ಪಾಟೀಲ್.—ಯಾವುದಾದರೂ ಪಂಚಾಯಿತಿಯವರು ನಾನು ಮೊದಲು ಹೇಳಿದಂತೆ ಮಾಡಿದರೆ, ಅಲ್ಲಿ ಸಸಿಗಳನ್ನು ಹಾಕುವ ವಿಷಯವನ್ನೂ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಫ್. ಪಾಟೀಲ್.—ಇರುವುದನ್ನು ಹೇಳುತ್ತಿದ್ದೇನೆ. ಮಂತ್ರಿಗಳು ಹೇಳಿ ಹೋಗುತ್ತಾರೆ. ಯಾವ ಬಡ್ಜೆಟ್ಟಿನಲ್ಲಿ ಇದಕ್ಕೆ ಖರ್ಚು ಮಾಡಲು ದುಡ್ಡಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ ?

[Mr. SPEAKER *in the chair.*]

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅನೇಕ ಬಾಬುಗಳಲ್ಲಿ ದೇಶದ ಉತ್ಪತ್ತಿಯನ್ನು ಹೆಚ್ಚಿಸಲು ಸರ್ಕಾರಿ ಕೆಲಸಗಳನ್ನು ಎಚ್ಚರಿಕೆಯಿಂದ ನಿರ್ವಹಿಸಲು ದೇಶದ ಕಲ್ಯಾಣಕ್ಕೋಸ್ಕರ ಮಂತ್ರಿಗಳನ್ನು ಜಾಸ್ತಿ ಮಾಡಿಕೊಂಡಂಥಾದ್ದನ್ನು ಜನ ಮರೆಯುವುದಿಲ್ಲ. ಹೊಸದಾಗಿ ಬಂದಿರುವ ಮಂತ್ರಿಗಳು ತಮ್ಮ ತಮ್ಮ ಖಾತೆಗಳನ್ನು ವಹಿಸಿಕೊಂಡಿದ್ದಾರೆ. ಇವರು ಯಾವ ಶ್ರೀಮಂತರ ದಯಾ-ದಾಕ್ಷಿಣ್ಯಗಳಿಗೂ ಒಳಗಾಗದೆ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ದೇಶದ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಬೇಕೆಂದು ಹೇಳಿ ಕಡೇ ಗಳಿಗೆಯಲ್ಲಿ ಅಧ್ಯಕ್ಷರು ನನಗೆ ಭಾಷಣ ಮಾಡಲು ಒಂದೆರಡು ನಿಮಿಷಗಳ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri H.M. CHANNABASAPPA.—Mr. Speaker, Sir, there is not much time for me to reply on the comments that have been made by Hon'ble. Members of this House during the discussion on the Governor's Speech. But for one reference made by Hon'ble Sri Sunthankar, I do not think there was an occasion for me to stand up. Hon'ble Members will know that a State has great responsibilities to discharge, particularly in the matter of maintenance of law and order position safely and give protection to the people and bring to book bad elements. In doing this, there is room for comments being made in diverse manners. Sri Sunthankar made pointed reference to the state of affairs obtaining in Belgaum. As Minister for Public Works and Electricity, I had occasion to tour Belgaum areas and know facts for myself as to the situation prevailing in that part of the State. I had occasion also to address a large gathering of people at Belgaum when my Hon'ble Friends who are returned from that area...

Sri G. VENKATAI GOWDA.—In Marathi or Kannada?

Sri H. M. CHANNABASAPPA.—In Kannada. Hon'ble Member Sri V. S. Patil was there. Sri Samji was there.

Sri V. S. PATIL.— On a point of order. While answering the debate on behalf of Government, is it advisable or is it allowed for any Member of the Government to ventilate any personal information or personal impression? He is representing the Government and must place the facts as per the reports of Government and not on the basis of personal knowledge.

Sri H. M. CHANNABASAPPA.—I am very glad that Hon'ble Member Sri V.S. Patil has been very fair to me.

Mr. SPEAKER.—For the first time, such an objection has been taken. I know the Hon'ble Member Sri Patil is not feeling sincere about the point of order.

Sri H. M. CHANNABASAPPA.—Sri V.S. Patil was there, Sri Samji was there. I do not know whether Sri Sunthankar was also there. Sri Sunthankar must have been there. It was an occasion for laying the

foundation stone for a bridge to be constructed in that area. From my knowledge of things and what I have been able to gather....

Sri V. S. PATIL.—That is the reason I raised the point of order. Is he replying to-day as Minister for P.W.D. or is he replying to the debate as Minister in-charge of Home Affairs.

Sri M. C. NARASIMHAN.—He cannot get out of his past habit.

Mr. SPEAKER.—Let us take it that he combines both.

Sri H. M. CHANNABASAPPA.—I fail to know why Sri V.S. Patil is so touchy about it.

On that occasion, I saw the people of Marathi area, on whose behalf my friends speak so much, feeling so happy about the administration of Mysore.

Sri V. S. PATIL.—Sir, I again insist on the point of order. We have the greatest grievance against the Home Department and not against the P.W.D.

Sri H. M. CHANNABASAPPA.—P.W.D. creates a sense of satisfaction. Home comes in only when there is no satisfaction.

So, P.W.D. has already created satisfaction amongst the people. Why do you create a sense of dissatisfaction?

Sri K. F. PATIL.—It is political.

Sri H. M. CHANNABASAPPA.—The feeling amongst the common men in Belgaum area is they are very happy, particularly in recent times when great conveniences are being created and at very great speed, there is a very great sense of satisfaction amongst the common people. They are not so much bothered whether they are in Karnataka or in Bombay. They want amenities and what they had not for the last so many years, they are now having and this has created a sense of satisfaction amongst them. They some times go to the extent of saying: "free us from these people". They say, 'we are terribly tired of it.' Somehow these friends do create an occasion for themselves. Otherwise there is no place for them. That is the whole difficulty.

Sri V. S. PATIL.—That is a complete misrepresentation that is being made by the Hon'ble Minister. There is another occasion for us to rebut it and I will deal with this point.

Sri H. M. CHANNABASAPPA.—I am not yielding. I am on my legs. My friend is a very good parliamentarian. I may say with fairness to my friend, that I would take him out of that. The position is this. I had an occasion to speak on this no-tax compaign. Here are our own friends who are the makers of law. They are the people who legislate and here are some friends who go and preach violation against the law which they themselves make. Well, I ask them Sir, if they want any part of Mysore to be added on to Maharashtra, Mr. V. S. Patil who is an excellent lawyer, an experienced lawyer and an able parliamentarian-

(SRI H. M. CHANNABASAPPA)

